ನಮಗೆ ಯಾವ ರೀತಿಯ ರಕ್ಷಣೆಯನ್ನು ಮಾಡಿಕೊಡುತ್ತಾರೆ ಎಂಬ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ದಯಮಾಡಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಅವರು ಹೇಳುವ ವಿಚಾರದಲ್ಲಿ ಏನು ಸತ್ಯಾಂಶ ಇದೆ ಎಂಬುದನ್ನು ತರಿಸಿನೋಡಿ.

ಶ್ರೀಮತಿ ಮೋಟಮ್ಮ : ಮಾನ್ಯ ಕರಿಯಣ್ಣನವರು ಹೇಳಿದ ವಿಚಾರಗಳ ಬಗ್ಗೆ ನಾನು ಮಾತನಾಡಲು ಇಷ್ಟಪಡುತ್ತೇನೆ. ಯಾವುದೇ ಒಂದು ಈ ರೀತಿಯ ಘಟನೆಯ ಬಗ್ಗೆ ನಾವುಗಳು ಇಲ್ಲಿ ಮಾತನಾಡುವುದು ತಪ್ಪು, ಅನ್ಯಾಯವನ್ನು ಅನ್ಯಾಯವೆಂದು ಹೇಳುವುದು ತಪ್ಪು ಅಂದರೆ ಇಲ್ಲಿ ನಡೆದ ಚರ್ಚೆಯ ವಿರುದ್ಧ ಶಾಸಕರ ವಿರುದ್ಧ ಘೋಷಣೆಗಳನ್ನು ಕೂಗಿದರೆ, ಈ ಸದನಕ್ಕೆ ಯಾವ ಗೌರವ ಬಂದ ಹಾಗಾಯಿತು? ಶಾಸಕರುಗಳಿಗೆ ಏನು ಗೌರವ ಬಂತು? ಇದು ಪ್ರಿವಿಲೇಜ್ ಆಗುವುದಿಲ್ಲವೇ? ಹಾಗಾದರೆ ಇನ್ನು ಮುಂದೆ ಶಾಸನ ಸಭೆಯಲ್ಲಿ ಈ ತರಹದ ಇಷ್ಯೂ ಬಂದಾಗ ಈ ವಿಷಯದ ಬಗ್ಗೆ ಯಾರೂ ಮಾತನಾಡಬಾರದು. ಎಷ್ಟೋ ಸಾರಿ ಆವೇಶ-ಭರಿತರಾಗಿ ಎಲ್ಲರೂ ಮಾತನಾಡುತ್ತಾರೆ. ಮಾನ್ಯ ವಾಟಾಳ್ ನಾಗರಾಜ್‌ರವರು ಆವೇಶವಾಗಿಯೇ ಮಾತನಾಡುತ್ತಾರೆ, ಅದು ತಪ್ಪೇ?

ಶ್ರೀ ವಾಟಾಳ್ ನಾಗರಾಜ್ : ಆದರೆ ನಾನು ಯಾವೊತ್ತು ಕೂಡ ಜಾತಿಯ ಬಗ್ಗೆ ಮಾತನಾಡಿಲ್ಲ. ನನ್ನ ಆವೇಶವೇನಿದ್ದರೂ ಧರ್ಮ, ಕೋಮು, ಜಾತಿಯ ಬಗ್ಗೆ ಇರುವುದಿಲ್ಲ.

ಶ್ರೀಮತಿ ಮೋಟಮ್ಮ : ಮೆರವಣಿಗೆ ಮಾಡಿ ಶಾಸಕರ ವಿರುದ್ಧ ಘೋಷಣೆ ಕೂಗಿದರೆ ಇದು ಯಾವ ಧರ್ಮ ಎಂಬುದನ್ನು ಹೇಳಬೇಕು. ಆದ್ದರಿಂದ ತಾವುಗಳು ನಮಗೆ ಯಾವ ರೀತಿಯ ನ್ಯಾಯವನ್ನು ಹೇಳುತ್ತೀರಿ ಎಂಬುದನ್ನು ನಾವು ಕಾದು ನೋಡುತ್ತೇವೆ.

ಶ್ರೀ ಬಿ. ಹೆಚ್. ಲಕ್ಷ್ಣಣ್ಣಯ್ಯ : ಮಾನ್ಯ ಅಧ್ಯಕ್ಷರೇ, ಇವತ್ತು ಪತ್ರಿಕೆಯಲ್ಲಿ ಬಂದಿರುವುದನ್ನು ನಾನು ಓದಿದ್ದೇನೆ. ಅವತ್ತು ಈ ಸದನದಲ್ಲಿ ಕೆಲವು ಸದಸ್ಯರುಗಳು ಮಾತನಾಡಿದಂಥ ವಿಚಾರದಲ್ಲಿ ಯಾರೂ ಜಾತಿಯನ್ನು ಎಣಿಸಿ ಮಾತನಾಡಲಿಲ್ಲ. ಅಲ್ಲಿ ಅಮಾನುಷ ಕೃತ್ಯ ನಡೆದಿದೆ ಕೊಲೆ ನಡೆದಿದೆ, ಅದರ ಬಗ್ಗೆ ಸ್ವಲ್ಪ ಒತ್ತು ಕೊಟ್ಟು ಮಾತನಾಡಿದರು. ಆ ಬದನವಾಳು ಗ್ರಾಮಕ್ಕೆ ನಾವೂ ಸಹ ಹೋಗಿದ್ದೆವು. ಅಲ್ಲಿ ಕೂಡ ನಾವು ಇದನ್ನೇ ಹೇಳಿದೆವು. ಇದೊಂದು ಜನಾಂಗದ ಮೇಲೆ ನಾವು ತಪ್ಪನ್ನು ಹೊರಿಸುವುದಕ್ಕಾಗುವುದಿಲ್ಲ ಅಥವಾ ಒಂದು ಊರಿನ ಮೇಲೆ ತಪ್ಪನ್ನು ಹೊರಿಸುವುದಕ್ಕಾಗುವುದಿಲ್ಲ. ಯಾರೋ ಕೆಲವು ಜನ ಮಾಡಿರತಕ್ಕಂಥದ್ದಕ್ಕೆ ನೀವು ಹರಿಜನರು ಇಡೀ ಊರೇ ಮಾಡಿದರು, ಅಥವಾ ಒಂದು ಜನಾಂಗದವರು ಮಾಡಿದರು ಅಂತ ತಿಳಿದುಕೊಳ್ಳಬಾರದೆಂದು ನಾವು ಅಲ್ಲಿಯೂ ಕೂಡ ಹೇಳಿದ್ದೇವೆ. ಆದರೂ ನಿನ್ನೆ ನಡೆದಂತಹ ನಂಜನಗೂಡಿನಲ್ಲಿ ನಡೆದಂಥ ಸಬೆಯಲ್ಲಿ ಈ ಎಲ್ಲಾ ವಿಚಾರಗಳ ಬಗ್ಗೆ ಮಾತನಾಡಿದ್ದಾರೆ. ಅವರು ಒಂದು ಜನಾಂಗದ ಮೇಲೆ ಮಾತನಾಡಿದ್ದಾರೆ ಎನ್ನತಕ್ಕಂಥಾದ್ದನ್ನು ವ್ಯಕ್ತಪಡಿಸಿದ್ದಾರೆ. ಆದರೆ ಅವರು ಈ ಕೊಲೆಯ ಬಗ್ಗೆ ಏನೇನೂ ಮಾತನಾಡಲಿಲ್ಲ. ಇದು ನಿಜವಾಗಿಯೂ ನನಗೆ ಬಹಳ ಸಣ್ಣದು ಎಂದು ಅನ್ನಿಸಿತು. ಇದು ಯಾವ ಜನಾಂಗದ ಮೇಲೆ ಆಗಲಿ, ಯಾರ ಮೇಲೇ ಆಗಲಿ, ಉದ್ದೇಶಪೂರ್ವಕವಾಗಿ ಯಾರೂ ಮಾತನಾಡಿಲ್ಲ. ಹರಿಜನರಿಗೆ ನಾವು ಶಾಂತಿಯಿಂದ ಹೋಗಬೇಕು, ಅದೇ ಊರಿನ ಲಿಂಗಾಯಿತರಾಗಲಿ, ಹರಿಜನರಾಗಲಿ, ನೀವೆಲ್ಲಾ ಒಟ್ಟಿಗೆ ಬದುಕಬೇಕು. ಏನೋ ಒಂದು ಘಟನೆ ನಡೆದಿದೆ. ಅದಕ್ಕೆ ನಿಮಗೆ ಇವತ್ತು ಆಕ್ರೋಷ ಇದ್ದರೂ ಅದನ್ನು ಶಮನ ಮಾಡಿಕೊಳ್ಳಬೇಕು, ಅಂದ ಹಾಗೆ ನೀವೆಲ್ಲಾ ಒಟ್ಟಿಗೆ ಹೋಗಬೇಕು ಯಾರೋ ಕೆಲವು ಜನ ಕಿಡಿಗೇಡಿಗಳು ಮಾಡಿರತಕ್ಕಂಥ

ಈ ಘಟನೆಯನ್ನು ಇಡೀ ಒಂದು ಜನಾಂಗದ ಮೇಲೆ ಹಾಕುವುದು ಬೇಡ ಎಂದು ಅಲ್ಲಿ ನಾವು ವಿವರಿಸಿದ್ದೆವು. ಆದ್ದರಿಂದ ಈ ಸದನದಲ್ಲಿ ಘಾತನಾಡತಕ್ಕಂಥವರು ಅವರು ಯಾವುದೇ ಜನಾಂಗದ ಬಗ್ಗೆ ಉಚ್ಚರಿಸಿಲ್ಲ. ಆದ್ದರಿಂದ ಅವರಿಗೆ ಈ ಸಂದರ್ಭದಲ್ಲಿ ತಾವು ರಕ್ಷಣೆಯನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ. ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಬದನವಾಳು ಪ್ರಕರಣದಲ್ಲಿ ನಡೆದಿರತಕ್ಕಂಥದ್ದು ಅತ್ಯಂತ ಅಮಾನುಷ್ಯವಾಗಿರತಕ್ಕಂಥ ಒಂದು ಕೃತ್ಯಯಾಗಿದೆ. ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸರ್ಕಾರದಿಂದ ಏನು ಮಾಡಬೇಕೋ ಅದನ್ನು ಮಾಡಿದ್ದಾರೆ. ಸಿ.ಬಿ.ಐ.ಗೆ ಇದನ್ನು ರೆಫರ್ ಮಾಡಿದ್ದಾರೆ, ಇದಕ್ಕಿಂತ ಹೆಚ್ಚಿನದನ್ನು ನಾವು ನಿರೀಕ್ಷೆ ಮಾಡುವುದಕ್ಕಾಗುವುದಿಲ್ಲ. ಕಾನೂನಿನ ಚೌಕಟ್ಟಿನೊಳಗೆ ಏನು ಮಾಡಬೇಕೆನ್ನುವುದರ ಬಗ್ಗೆ ಕ್ರಮ ತೆಗೆದುಕೊಂಡಿದ್ದಾರೆ. ಆದರೆ ಒಂದು ಮಾತನ್ನು ನಾನು ಆ ಸಂದರ್ಭದಲ್ಲಿ ನಿಮಗೆ ಹೇಳಿದ್ದೆ. ಅಲ್ಲಿ ಇರತಕ್ಕಂಥ ಲೋಕಸಭಾ ಸದಸ್ಯರಾದಂಥ ಮತ್ತು ಅಲ್ಲಿ ಎಂ.ಎಲ್.ಎ. ಆಗಿರತಕ್ಕಂಥ ಮಾನ್ಯ ಮಹದೇವರವರು ಇವರ ಮಧ್ಯೆ ಇರತಕ್ಕಂಥ ಘರ್ಷಣೆ ಏನಿದೆ ಇದೂ ಸಹಿತ ಜಾತಿಯ ಬಣ್ಣಗಳನ್ನು ತೆಗೆದುಕೊಳ್ಳುತ್ತಿದೆ ಎನ್ನತಕ್ಕದ್ದನ್ನು ಪ್ರಸ್ತಾಪ ಮಾಡಿ, ಮೈಸೂರಿನಿಂದ ಅನೇಕರು ಅಲ್ಲಿಗೆ ಹೋಗಿ ಪ್ರಚೋದನೆ ಮಾಡುತ್ತಿದ್ದಾರೆ ಎನ್ನತಕ್ಕದ್ದನ್ನು ಕೇಳಿದ್ದೇವೆ, ಈಗ ಘಟನೆ ನಡೆದಿದೆ, ಪಾಪ, ಅವರೂ ಏನೂ ತಪ್ಪಿಲ್ಲದೆ ಇರತಕ್ಕಂಥ ಜನ ಸತ್ತು ಹೋಗಿದ್ದಾರೆ. ತಾವು ಸಿ.ಬಿ.ಐ. ಇನ್‌ವೆಸ್ಟಿಗೇಷನ್ ಮಾಡಿಸಬಹುದು, ಅಥವಾ ಇನ್ನು 5-6 ಲಕ್ಷ ರೂಪಾಯಿಯನ್ನು ಸತ್ತಿರತಕ್ಕಂಥವರ ಫ್ಯಾಮಿಲಿಗಳಿಗೆ ಪರಿಹಾರವಾಗಿ ಕೊಡಬಹುದು. ಅವರನ್ನು ಮಾತ್ರ ತೆಗೆದುಕೊಂಡು ಬರುವುದಕ್ಕಾಗುವುದಿಲ್ಲ ಅನ್ನುವುದು ನಮಗೆಲ್ಲರಿಗೂ ಗೊತ್ತಿರತಕ್ಕಂಥ ವಿಚಾರವಾಗಿದೆ. ನಾನು ತಮ್ಮಲ್ಲಿ ವಿಶೇಷವಾಗಿ ಮನವಿ ಮಾಡಿಕೊಳ್ಳುವುದೇನೆಂದರೆ ಒಂದು ಕ್ರಮವನ್ನು ತಾವು ಸರ್ಕಾರದ ಮುನ್ನೆಚ್ಚರಿಕೆಯನ್ನು ತೆಗೆದುಕೊಳ್ಳಬೇಕಾಗಿತ್ತು. ಒಂದು ಕೋಮಿನವರು ಮಾಡಿದ ತಕ್ಷಣವೇ ಮತ್ತೊಂದು ಕೋಮಿನವರು ನಾವು ಏತಕ್ಕೆ ಮಾಡಬಾರದೆಂದು ಹೊರಟಿದ್ದಾರೆ. ಇದು ಕೇವಲ ಬದವನಾಳಿಗೆ ಸೀಮಿತವಾಗಿರುವುದಿಲ್ಲ. ಏಕೆಂದರೆ ಒಂದು ಪ್ರಕ್ಷುಬ್ಧವಾದ ವಾತಾವರಣ ಮೈಸೂರು ಜಿಲ್ಲೆಯಲ್ಲಿ ಇದೆ. ಇದು 1-2 ವರ್ಷಗಳಿಂದ ಆಗಿರತಕ್ಕಂಥದ್ದು ಅಲ್ಲ. ಹಲವಾರು ವರ್ಷಗಳಿಂದ ಇದು ಆಗಿಬರುತ್ತಿದೆ. ಮಂಡ್ಯಕ್ಕೆ ಹಬ್ಬುತ್ತದೆ, ಬೆಂಗಳೂರಿಗೆ ಹಬ್ಬುತ್ತದೆ, ಇದು ಹಬ್ಬಿಕೊಂಡೇ ಹೋಗುತ್ತದೆ. ನಾನೇನು ನಿಮಗೆ ಸಲಹೆ ಮಾಡುತ್ತೇನೆ ಎಂದರೆ ಮಾನ್ಯ ಮೋಟಮ್ಮನವರ ವಿರುದ್ಧ ಮತ್ತು ಮಲ್ಲಾಜಮ್ಮನವರ ವಿರುದ್ಧ ಅವರು ಘೋಷಣೆಗಳನ್ನು ಹಾಕಿದ್ದಾರೆ. ಅದರ ರಿಪರ್‌ಕಷನ್ಸ್ ಬೇರೆ ಕಡೆ ಆಗುತ್ತದೆ. ಮೂಲಭೂತವಾಗಿ ಸೌಹಾರ್ದಯುತವಾಗಿ ಅವರು ಬದುಕಬೇಕಾಗುತ್ತದೆ. ಅದಕ್ಕೆ ನಾನೇನು ಸಲಹೆ ಮಾಡುತ್ತೇನೆ ಎಂದರೆ ನೀವು ತಕ್ಷಣ ಯಾರು ಸೀನಿಯರ್ ಮಿನಿಸ್ಟರ್ ಇದ್ದೀರಿ, ಅಥವಾ ನೀವು ಹೋದರೆ ಏನೂ ತಪ್ಪು ಇಲ್ಲ. ಹೋಗಿ ಬಂದಿದ್ದೀರಿ, ಅಲ್ಲಿ ಕಲುಷಿತವಾಗಿರತಕ್ಕಂಥ ವಾತಾವರಣವನ್ನು ಪ್ರಕ್ಷುಬ್ಧವಾದಂತಹ ವಾತಾವರಣವನ್ನು ಸರಿಪಡಿಸಲಿಕ್ಕೆ ಸೀನಿಯರ್ ಮಿನಿಸ್ಟರ್ಸ್ ಹೋದರೂ ಪರವಾಗಿಲ್ಲ. ಎಲ್ಲಾ ಪಕ್ಷದ ಮುಖಂಡರುಗಳು ಹೋದರೂ ಪರವಾಗಿಲ್ಲ. ಎಲ್ಲಾ ರಿಲೀಜಿಯಸ್ ಲೀಡರ್ಸ್‌ಗಳನ್ನು ಕರೆದುಕೊಂಡು ಹೋದರೂ ಪರವಾಗಿಲ್ಲ. ತಕ್ಷಣ ಅದರ ಬೆಂಕಿಯನ್ನು ಆರಿಸತಕ್ಕಂಥ ಕಾರ್ಯಕ್ರಮವನ್ನು ನಾವೆಲ್ಲಾ ಮಾಡಬೇಕಾಗುತ್ತದೆ. ಈ ಕ್ಲಾಷಿಂಗ್ಸ್ ಹೀಗೆ ಮುಂದುವರೆದರೆ ಬಹಳ ಕಷ್ಟವಾಗುತ್ತದೆ. ಸಾಮಾನ್ಯವಾಗಿ ದಲಿತರ ಮೇಲೆ ದೌರ್ಜನ್ಯವಾದ ತಕ್ಷಣವೇ ಯಾರೂ ಸಹಿತ ಹೊರಗಡೆ ಇಂತಹವರು ಮಾಡಿದ್ದಾರೆ ಅಂತ ಮೆರವಣಿಗೆ ಆಗುತ್ತಿರಲಿಲ್ಲ. ಏತಕ್ಕೆ ಆ ರೀತಿ ಆಯಿತು? ಪ್ರೊ : ನಂಜುಂಡಸ್ವಾಮಿಯವರು ಬಹಳ ಚೆನ್ನಾಗಿ ಮಾತನಾಡಿದರು. ಅದರಿಂದಾಗಿ ಇದನ್ನು ಹೀಗೆ ಮುಂದುವರಿಸಲಿಕ್ಕೆ ಬಿಟ್ಟರೆ ಇಡೀ ರಾಜ್ಯದಲ್ಲಿ ಬೆಂಕಿ ಹತ್ತಿಕೊಂಡು ಉರಿಯುತ್ತದೆ.

ಅಯೋಧ್ಯೆಯಲ್ಲಿ ಆದ ಹಾಗೆ ಮತ್ತೊಂದು ಕಡೆ ಇದು ಆಗುತ್ತಾ ಹೋಗುತ್ತದೆ. ಆದ್ದರಿಂದ ಇದರ ಬಗ್ಗೆ ಗಮನವನ್ನು ಕೊಡಬೇಕು. ತಾವು ತಕ್ಷಣ ಇಬ್ಬರನ್ನೂ ಕರೆಯಿಸಬೇಕು. ಮಾನ್ಯ ಮಹದೇವರವರಿಗೂ ಕರೆಯಿಸಿ ಆ ರೀತಿ ವೈಯುಕ್ತಿಕವಾದಂತಹ ಭಿನ್ನಾಭಿಪ್ರಾಯಗಳೂ ಏನಾದರೂ ಇದ್ದರೆ ಅದನ್ನು ಬಗೆಹರಿಸಲಿಕ್ಕೆ ನಿಮ್ಮ ಪಕ್ಷದ ವೇದಿಕೆ ಒಳಗೆ ಮಾಡಿದರೂ ಸಹಿತ ಪರವಾಗಿಲ್ಲ. ಈ ಜಾತಿ ಕಲಹವನ್ನೂ ತಾವು ಕೊನೆಗಾಣಿಸಲಿಕ್ಕೆ ಆ ಮಟ್ಟದಲ್ಲಿ ಕ್ರಮ ತೆಗೆದುಕೊಡಬೇಕು. ಎಲ್ಲಾ ರಾಜಕೀಯ ಪಕ್ಷದ ನಾಯಕರನ್ನು ಕರೆಯಿಸಿ; ನಮ್ಮ ಪಾರ್ಟಿಯಿಂದ ನಮ್ಮ ನಾಯಕರು ನಾವೆಲ್ಲರೂ, ಬೇಕಾದರೆ ನಮ್ಮ ಸೀನಿಯರ್ ಲೀಡರ್ಸ್‌ಗಳನ್ನೂ ಬೇಕಾದರೆ ನಾವು ಕರೆಸೋಣ, ಇದನ್ನು ಕೊನೆಗಾಣಿಸುವುದಕ್ಕೆ ತಾವು ಪ್ರಯತ್ನ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀಮತಿ ಮೋಟಮ್ಮ : ನೀವು ಮಾತನಾಡಿದ್ದೀರಿ, ಮಾನ್ಯ ದೇಶಪಾಂಡೆಯವರು ಮಾತನಾಡಿದ್ದಾರೆ, ಮಾನ್ಯ ವೈ. ಕೆ. ರಾಮಯ್ಯನವರು ಇನ್ನೂ ಚೆನ್ನಾಗಿ ಮಾತನಾಡಿದ್ದಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯ : ಅದು ಖಂಡಿತವಾಗಿ ತಪ್ಪು, ಅದನ್ನು ಡಿಫೆಂಡ್ ಮಾಡಿಕೊಳ್ಳಲಿಕ್ಕೆ ಸಾಧ್ಯವೇ ಇಲ್ಲ.

ಶ್ರೀಮತಿ ಮೋಟಮ್ಮ : ಅವರ ವಿರುದ್ಧ ಏತಕ್ಕೆ ಘೋಷಣೆಯನ್ನು ಕೂಗಲಿಲ್ಲ? ಮಲ್ಲಾಜಮ್ಮ, ಮೋಟಮ್ಮನವರ ವಿರುದ್ಧ ಮಾತ್ರ ಘೋಷಣೆಯನ್ನು ಏತಕ್ಕೆ ಕೂಗಿದ್ದಾರೆ?

ಶ್ರೀ ಕರಿಯಣ್ಣ : ಮಾನ್ಯ ದೇಶಪಾಂಡೆಯವರು ಮಾತನಾಡಿದರು, ಪ್ರೊಃ ನಂಜುಂಡಸ್ವಾಮಿಯವರು ಮಾತನಾಡಿದರು, ಯಾರ ವಿರುದ್ಧವೂ ಘೋಷಣೆಯನ್ನು ಕೂಗಿಲ್ಲ. ಯಾರು ಪರಿಶಿಷ್ಟ ಜಾತಿಯವರು ಇದ್ದಾರೋ ಅವರು ಇಷ್ಟೇ ಜನಕ್ಕೆ ಕೂಗಿದ್ದಾರೆ. ಮಾನ್ಯ ಮಹದೇವ್‌ರವರಿಗೆ ಮಾತ್ರ ಜಯಕಾರವನ್ನು ಹಾಕಿದ್ದಾರೆ.

* ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಸಿಂಧ್ಯ ಅವರು ಏನು ಸಲಹೆಯನ್ನು ಮಾಡಿದರು ಅದನ್ನು ಬೆಂಬಲಿಸುತ್ತೇನೆ. ಅವರಲ್ಲಿ ವೈಯುಕ್ತಿಕ ದ್ವೇಷ ಬಂದಿದೆ. ಮಹದೇವ್ ಮತ್ತು ಪಾರ್ಲಿಮೆಂಟಿನ ಮೆಂಬರ್ ಅವರ ರಾಜಕಾರಣವನ್ನು ಅವರು ಮಾಡಿಕೊಳ್ಳುತ್ತಾರೆ. ಆದರೆ ಪರಿಸ್ಥಿತಿ ಏನಾಗಿದೆ ಅಂದರೆ ಅಲ್ಲಿ ಸತ್ತಿರತಕ್ಕಂಥವರು ನಿಜವಾಗಿಯೂ ಮುಕ್ತರು. ಅದರ ಬಗ್ಗೆ ಸಾರ್ವತ್ರಿಕವಾಗಿ ಪ್ರತಿಯೊಬ್ಬರೂ ಖಂಡನೆಯನ್ನು ಮಾಡಿದ್ದಾರೆ. ಅದರಲ್ಲಿ ಎರಡನೆಯ ಅಭಿಪ್ರಾಯ ಇಲ್ಲ. ಸರ್ಕಾರದಿಂದಲೂ ಸಹ ಏನೇನು ಅನುಕೂಲಗಳನ್ನು ಮಾಡಬೇಕು ಯಾವ್ಯಾವ ರೀತಿ ಪರಿಹಾರವನ್ನು ಕೊಡಬೇಕೋ ಅದನ್ನು ಕೊಡುತ್ತೇವೆಂದು ಹೇಳಿದ್ದಾರೆ. ನಾನು ಸರ್ಕಾರಕ್ಕೆ ಸಲಹೆಯನ್ನು ಮಾಡುವುದೇನೆಂದರೆ ಈ ರಾಜ್ಯದಲ್ಲಿ ಜಾತಿಯ ಗೊಂದಲ ಇಡೀ ರಾಜ್ಯದಲ್ಲಿ ಬೆಳೆಯದ ರೀತಿಯಲ್ಲಿ ಅನುಕೂಲ ಮಾಡಬೇಕಾದರೆ ಮುಖಂಡರೆಲ್ಲ ಒಂದು ಕಡೆ ಕುಳಿತುಕೊಂಡು ಮುಕ್ತ ಮನಸ್ಸಿನಿಂದ ಚರ್ಚೆ ಮಾಡಬೇಕು. ಇದರ ಬಗ್ಗೆ ಮುಕ್ತ ಮನಸ್ಸಿನಿಂದ ಚರ್ಚೆಯು ನಡೆಯಲಿ ; ನಾನಂತೂ ಯಾವತ್ತೂ ಇಂತಹ ಚರ್ಚೆಗಳಲ್ಲಿ ಭಾಗವಹಿಸಿದವನು ಅಲ್ಲ, ನಮ್ಮದು ಏನಿದ್ದರೂ ಕರ್ನಾಟಕ, ಕನ್ನಡ; ಈ ಸಿದ್ಧಾಂತದಲ್ಲಿ ಹೋದವರೇ ಹೊರತು ಇತ್ತೀಚಿನ ದಿನಗಳಲ್ಲಿ ಬೆಳೆಯುತ್ತಿರತಕ್ಕಂಥ ಈ ರೀತಿ ನೀತಿಗಳನ್ನು ನೋಡಿದಾಗ ಮನಸ್ಸಿಗೆ ಒಂದು ರೀತಿ ನೋವಾಗುತ್ತದೆ. ಒಂದು ಕಡೆ ಇವರು ಮೆರವಣಿಗೆಯನ್ನು ಮಾಡುವುದು, ಮತ್ತೊಂದು ಕಡೆ ಇನ್ನೊಂದು ಮೆರವಣಿಗೆಯನ್ನು ಮಾಡುವುದು, ಅವರು ಇವರನ್ನು ಬೈಯುವುದು, ಈ ರೀತಿ ಆಗುವುದಾದರೆ ಇದರಿಂದ ರಾಜ್ಯದಲ್ಲಿ ಶಾಂತ ವಾತಾವರಣ ಬರುವುದಿಲ್ಲ. ಮೂಲಭೂತವಾಗಿ, ಅಲ್ಲಿ ಏನಾಯಿತು

ಎಂದರೆ ಸತ್ತಿರತಕ್ಕಂಥ ವಿಚಾರ ಬೇರೆಯಾದರೂ ಅಲ್ಲಿ ಬೆಳೆಯತಕ್ಕಂಥ ರಾಜಕಾರಣಕ್ಕೆ ಹೋಗುವುದಾದರೆ ಇದರ ದಿಕ್ಕೆ ಬೇರೆ ರೀತಿಯಾಗುತ್ತದೆ. ಅದಕ್ಕೋಸ್ಕರ ತಮ್ಮ ಮೂಲಕ ಸರ್ಕಾರವನ್ನು ಮತ್ತು ಇಲ್ಲಿರತಕ್ಕಂಥ ಎಲ್ಲಾ ಪಕ್ಷದ ಮುಖಂಡರುಗಳನ್ನು ನಾನು ಅತ್ಯಂತ ಕಳಕಳಿಯಿಂದ ಮನವಿಯನ್ನು ಮಾಡುತ್ತಿದ್ದೇನೆ. ಇದರ ಬಗ್ಗೆ ಒಂದು ಕಡೆ ಎಲ್ಲರೂ ಕುಳಿತು ಒಂದು ಚಿಂತನೆಯನ್ನು ಮಾಡಿ ರಾಜ್ಯರ ಜನತೆಯಲ್ಲಿ ಮನವಿಯನ್ನು ಮಾಡಿಕೊಳ್ಳೋಣ. ಇದರ ಬಗ್ಗೆ ಪಕ್ಷಾತೀತವಾದಂತಹ ಮನವಿಯನ್ನು ಮಾಡೋಣ. ಆದದ್ದು ಆಗಿದೆ ಇನ್ನು ಮುಂದೆ ಈ ರೀತಿ ಆಗದ ಹಾಗೆ ನೋಡಿಕೊಳ್ಳಬೇಕು, ಯಾವ ರೀತಿ ನಾವು ಹೊಂದಾಣಿಯನ್ನು ಮಾಡಿಕೊಂಡು ಹೋಗಬೇಕು. ಇನ್ನು ಮುಂದೆ ಯಾವ ಹಳ್ಳಿಗಳಲ್ಲಾಗಲಿ, ಪಟ್ಟಣಗಳಲ್ಲಾಗಲಿ, ಯಾವುದೇ ಮಟ್ಟದಲ್ಲಿ ಈ ಘರ್ಷಣೆ ಅವಕಾಶವಾಗಬಾರದೆನ್ನತಕ್ಕ ಮಾತನ್ನು ನಾವು ಹೇಳಬೇಕಾಗುತ್ತದೆ. ಇಲ್ಲದಿದ್ದರೆ ಏನಾಗುತ್ತದೆ ಅಂದರೆ ಒಂದು ಕಡೆ ಇವರು ಯಾರಿಗೋ ಧಿಕ್ಕಾರವನ್ನು ಹಾಕುವುದು. ಮತ್ತೊಂದು ಕಡೆ ಅವರು ಧಿಕ್ಕಾರವನ್ನು ಹಾಕುವುದು, ಕೊನೆಗೆ ಅಮಾಯಕರ ಮೇಲೆ ತೊಂದರೆಯಾಗುತ್ತದೆ. ಈ ಪರಿಸ್ಥಿತಿ ಆಗಬಾರದು ಎನ್ನತಕ್ಕ ಮಾತನ್ನು ಹೇಳುತ್ತೇನೆ. ಇದು ನಡೆಯುತ್ತಿದೆ ; ಈಗ ನಾಗುವಳ್ಳಿಯಲ್ಲಿ ಆಯಿತು. ಕೊಳ್ಳೇಗಾಲದಲ್ಲಿ ಆಯಿತು, ಸರಗೂರಿನಲ್ಲಿ ಆಯಿತು, ಈ ರೀತಿ ಆದರೆ ನಾವು ಹೇಗೆ? ಆದ್ದರಿಂದ, ನಾವು ಏನೋ ಮಾತನಾಡಿದ್ದೇವೆಂದು ನಮ್ಮ ವಿರುದ್ಧ ಇನ್ನು ಯಾರೋ ಘೋಷಣೆಯನ್ನು ಕೂಗತಕ್ಕಂಥದ್ದು. ಹೊರಗಡೆ ಇರತಕ್ಕಂಥವರು ಇನ್ನೇನೋ ಹೇಳತಕ್ಕಂಥದ್ದು ; ಇದರಿಂದ,ಏನಾಗುತ್ತದೆ ಅಂದರೆ, ಬಹಳ ಗೊಂದಲವಾಗುತ್ತದೆ. ತಾವು ಇದನ್ನು ನಿಲ್ಲಿಸಬೇಕು. ಇದರ ಹಿನ್ನೆಲೆಯೇನು? ಇದಕ್ಕೆ ಯಾವ ಕಾರಣ. ಯಾರ ಜೊತೆಯಲ್ಲಿ ನಾವು ಮಾತನಾಡಬೇಕು, ಒಂದು ದುಂಡುಮೇಜಿನ ಸಭೆಯನ್ನು ತಕ್ಷಣವೇ ತಾವು ಕರಿಯಿರಿ, ಎಲ್ಲಾ ಮುಖಂಡರುಗಳನ್ನು ಕರೆಯಿರಿ, ಕರೆದು ಕುಳಿತುಕೊಂಡು ಏನು ಮಾಡಬೇಕೆಂಬುದರ ಬಗ್ಗೆ ಸಾರ್ವತ್ರಿಕವಾದಂತಹ ಮನವಿಯನ್ನು ಸಲ್ಲಿಸಿ, ಕೋಮು ಗಲಭೆ ಬಂದಾಗಲೆಲ್ಲ ಅನೇಕ ಸಾರಿ ನಮ್ಮನ್ನೆಲ್ಲಾ ಕರೆದು ಮಾತನಾಡಿದ್ದೀರಿ. ಇಂತಹ ಸಂದರ್ಭ ಬಂದಾಗ ವಿರೋಧ ಪಕ್ಷಗಳು ಮತ್ತು ಆಡಳಿತ ಪಕ್ಷಗಳು ಒಟ್ಟಿಗೆ ಕುಳಿತುಕೊಂಡು ಯಾವ ರೀತಿ ಇದನ್ನು ಮಾಡಬೇಕೆನ್ನತಕ್ಕ ದೃಷ್ಟಿಗೆ ತಾವು ಹೋದರೆ ಒಳ್ಳೆಯದಾಗುತ್ತದೆಯೆಂದು ನನಗೆ ಅನ್ನಿಸುತ್ತದೆ. ತಾವು ಪತ್ರಿಕೆಯಲ್ಲಿ ನೋಡಿರುವ ಪ್ರಕಾರ ಅಲ್ಲಿ ನಂಜನಗೂಡಿನ ಶಾಸಕರು ಮತ್ತು ಅಲ್ಲಿನ ಲೋಕಸಭಾ ಸದಸ್ಯರು ಇವರುಗಳ ಘರ್ಷಣೆಗಳು ಈ ಮಟ್ಟದಲ್ಲಿ ಶುರುವಾದರೆ ಹೇಗೆ? ಇದು ಸರಿಯಲ್ಲ. ಯಾವುದಾದರೊಂದು ತೀರ್ಮಾನಕ್ಕೆ ಬರಬೇಕು. ಅದಕ್ಕೆ ಈ ಅಮೂಲ್ಯವಾದಂತಹ ಸಲಹೆಯನ್ನು ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ತಮ್ಮ ಮೂಲಕ ಕೊಡುತ್ತಿದ್ದೇನೆ. ಶಾಂತ ವಾತಾವರಣ ನಿರ್ಮಾಣವಾಗಬೇಕಾದರೆ. ಒಟ್ಟಿಗೆ ಒಂದು ಮನವಿಯಾಗಬೇಕು, ಮತ್ತು ಎಲ್ಲರನ್ನೂ ಕರೆದು ಮಾನ್ಯ ಮುಖ್ಯಮಂತ್ರಿಗಳು ಒಂದು ಮುಕ್ತ ಚರ್ಚೆಯನ್ನು ಆರಂಭ ಮಾಡಬೇಕೆಂದು ನಾನು ತಮ್ಮ ಮೂಲಕ ಅವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಕಾಗೊಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ, ಬದನವಾಳ್ ಗ್ರಾಮದಲ್ಲಿ ನಡೆದಂತಹ ಘಟನೆಯ ಹಿನ್ನಲೆಯಲ್ಲಿ ಏನು ಒಂದು ಮೆರವಣಿಗೆ ನಡೆದಿದೆ. ಅದರ ಬಗ್ಗೆ ನಾವೆಲ್ಲಾ ದುಃಖ ಪಡುವಂತಹ ವಿಚಾರವಾಗಿದೆ ಮತ್ತು ವ್ಯಥೆ ಪಡುವಂತಹ ವಿಚಾರವಾಗಿದೆ. ಏಕೆಂದರೆ ಐದು ಸಾವಿರ ವರ್ಷಗಳಿಂದ ಈ ಹರಿಜನ ಗಿರಿಜನರನ್ನು ಸಾಮಾಜಿಕವಾಗಿ ಶೋಷಣೆಗೆ ಒಳಪಡಿಸಿ ತುಳಿತಕ್ಕೆ ತಳ್ಳಿದ್ದವಲ್ಲಾ ಅವರಿಗೆ ಐದು ವರ್ಷದಲ್ಲಿ ಸಿಟ್ಟು ಬಂದಿದ್ದರೆ ಏನು ಅನಾಹುತ ಈ ಸಮಾಜದಲ್ಲಿ ಆಗಬಹುದಿತ್ತು ಎಂಬುದನ್ನು ನಾವು ಆಲೋಚನೆ ಮಾಡಬೇಕು. ನನ್ನಂಥವನನ್ನು ಐದು ವರ್ಷಗಳ ಕಾಲ ಅಸ್ಪರ್ಶನನ್ನಾಗಿ ಈ ಸಮಾಜ ಇಟ್ಟಿದ್ದರೆ, ನನಗೆ ಅಕಸ್ಮಾತಾಗಿ ಸಿಟ್ಟು ಬಂದರೆ, ಯಾವ ರೀತಿ ನಾನು ಪ್ರತಿಕ್ರಿಯೆ ವ್ಯಕ್ತಪಡಿಸುತ್ತೇನೆ ; ಯಾವ ರೀತಿ ಪ್ರತಿಭಟನೆ ವ್ಯಕ್ತಪಡಿಸುತ್ತೇನೆ ಎಂಬುದನ್ನು ನಾವು ಮನುಷ್ಯರಾಗಿ ಊಹಿಸಬೇಕು.

ಹಾಗಾಗಿ ಈಗ ನಡೆದಿರತಕ್ಕಂಥ ಘಟನೆಯಿಂದ ಇಡೀ ಸಮಾಜ ತಲೆ ತಗ್ಗಿಸಬೇಕಾದಂತಹ ವಿಚಾರ. ಐದು ಸಾವಿರ ವರ್ಷಗಳಿಂದಲೂ ಸಹಿಸಿಕೊಂಡು ಬಂದಿರತಕ್ಕಂಥ ಆ ವರ್ಗ ಸ್ವಲ್ಪ ಎಚ್ಚೆತ್ತಿದ್ದರೆ ಅಥವಾ ಅನ್ಯಾಯವಾಗಿರುವುದರ ಬಗ್ಗೆ ಪ್ರತಿಭಟನೆ ಮಾಡಿದ್ದರೆ ಬೇರೆಯವರು ಏಕೆ ಸಿಟ್ಟು ಆಗಬೇಕು ಎಂಬುದು ಗೊತ್ತಾಗುತ್ತಿಲ್ಲ. ಇವತ್ತು ಒಬ್ಬ ಮನುಷ್ಯನಾಗಿ ನಾಗರೀಕ ಜೀವನದಲ್ಲಿ ನೀವು ಸಾಮಾಜಿಕವಾಗಿ ಏನು ತುಳಿತಕ್ಕೆ ಸಿಕ್ಕಿದ್ದೀರಿ, ನೀವು ಇವತ್ತು ಎದ್ದು ನಿಂತು ಪ್ರತಿಭಟಿಸಿದರೆ ತಪ್ಪೇನೂ ಇಲ್ಲ. ಈ ಸಮಾಜ ಅದನ್ನು ತಿದ್ದಿಕೊಳ್ಳಬೇಕು. ಸಮಾಜ ಇದನ್ನು ಸರಿಪಡಿಸಬೇಕೆಂಬ ಜಾಗೃತಿ, ಪ್ರಜ್ಞೆ ನಮಗೆ ಬರಲೇಬೇಕೇ ವಿನಃ ಪ್ರತಿಯಾಗಿ ಪ್ರತಿಭಟನೆ ಮಾಡತಕ್ಕದ್ದು ಸಾಧುವಲ್ಲ. ಇಂತಹ ಸನ್ನಿವೇಶದಲ್ಲಿ ಯಾರೇ ಅದರ ಹಿಂದೆ ಇರಲಿ, ಯಾರೇ ಮೆರವಣಿಗೆ, ಸಂಘಟನೆ ಮಾಡುವುದು ಸರಿಯಲ್ಲ. ಅದಕ್ಕೆ ಅವಕಾಶ ಕೊಡಬಾರದು. ಲೋಕಸಭಾ ಸದಸ್ಯರು ನಮ್ಮ ಪಕ್ಷದ ಸಭೆಯಲ್ಲಿ ವಿವರಿಸಿ ಹೇಳಿದಾಗ ಇಡೀ ಸಮಾಜವನ್ನೇ ಇದಕ್ಕೆ ಹೊಣೆಯನ್ನಾಗಿ ಮಾಡತಕ್ಕದ್ದು ಸಾಧುವಲ್ಲ. ಏಕೆಂದರೆ ಎಚ್ಚರದಿಂದ ನಾವು ಮಾತನಾಡತಕ್ಕಂಥದನ್ನು ಕಲಿಯಬೇಕು. ಯಾರೋ ಕೆಲವು ದುಷ್ಕರ್ಮಿಗಳು ಮಾಡಿರುವಂತಹ ಕೆಲಸಕ್ಕೆ ಇಡೀ ಸಮಾಜವನ್ನೇ ಹೊಣೆಗಾರರನ್ನಾಗಿ ಮಾಡತಕ್ಕದ್ದು ಸಾಧುವಲ್ಲ ಎಂಬುದನ್ನು ಪ್ರತಿಯೊಬ್ಬರೂ ಮುಖ್ಯಮಂತ್ರಿಯಾದಿಯಾಗಿ ಇದನ್ನು ಸ್ಪಷ್ಟಪಡಿಸಿದ್ದಾರೆ. ಹಾಗಾಗಿ ಅಲ್ಲಿ ಮೆರವಣಿಗೆಯನ್ನು ಏರ್ಪಡಿಸಿ ಏನೂ ಗೊತ್ತಿಲ್ಲದ ಜನರನ್ನು ಎತ್ತಿ ಕಟ್ಟಿ ಶ್ರೀಮತಿ ಮೋಟಮ್ಮನವರನ್ನು ....

ಶ್ರೀ ಎಸ್. ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೇ, ಇಲ್ಲಿ ನಡೆದಿರತಕ್ಕಂಥ ಚರ್ಚೆಯಲ್ಲಿ ಮಾನ್ಯ ಲೋಕಸಭಾ ಸದಸ್ಯರಾದಂತಹ ** (ಶ್ರೀ ಶ್ರೀನಿವಾಸ ಪ್ರಸಾದ್‌ರವರ) ಹೆಸರನ್ನು ಮತ್ತೆ ಮತ್ತೆ ತೆಗೆದುಕೊಳ್ಳುತ್ತಿದ್ದಾರೆ. ಇದರ ಔಚಿತ್ಯ ಏನು? ಇದನ್ನು ನಾನು ಪ್ರಶ್ನೆ ಮಾಡಬೇಕಾಗಿದೆ. ಅವರು ಸದನದಲ್ಲಿ ಇಲ್ಲದಿರುವುದರಿಂದ ಅವರ ಹೇಳಿಕೆಯನ್ನಾಗಲಿ, ಪ್ರತಿಕ್ರಿಯೆಗಳಾಗಲಿ ಇದುವರೆಗೂ ಬಂದಿಲ್ಲ. ಆದುದರಿಂದ ದಯಮಾಡಿ ಅದರ ಬಗ್ಗೆ ಮಾತನಾಡಬೇಡಿ.

ಶ್ರೀ ಕೆ. ಹೆಚ್. ರಂಗನಾಥ್ : ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದ ಹಾಗೆ ನಾನೂ ಕೂಡ ಹೇಳಬೇಕು ಎಂದುಕೊಂಡಿದ್ದೆ. ಅವರು ಈ ಸದನದಲ್ಲಿ ಇಲ್ಲ. ಅನಾವಶ್ಯಕವಾಗಿ ಅವರ ಬಗ್ಗೆ ಪ್ರಸ್ತಾಪ ಮಾಡಿದ್ದನ್ನು ಸಮರ್ಥನೆ ಮಾಡುವುದಕ್ಕಾಗಲಿ, ನಿರಾಕರಣೆ ಮಾಡುವುದಕ್ಕಾಗಲೀ ಅವರಿಗೆ ಅವಕಾಶವಿಲ್ಲ. ಇದರ ಬಗ್ಗೆ ಪತ್ರಿಕೆಗಳಲ್ಲಿ ಹೇಳಿಕೆ ಬಂದಿದೆ. ಮಾನ್ಯ ಮಹದೇವರವರು ಪ್ರಸ್ತಾಪ ಮಾಡಿದ್ದಾರೆ. ಅವರು ಈ ಸದನದ ಸದಸ್ಯರು, ಅದರ ಬಗ್ಗೆ ನಾವು ಏನಾದರೂ ಮಾತನಾಡುವುದಕ್ಕೆ ಸಾಧ್ಯವಿದೆ. ಆದರೆ ** (ಶ್ರೀ ಶ್ರೀನಿವಾಸ ಪ್ರಸಾದ್ ಬಗ್ಗೆ) ಪ್ರಸ್ತಾಪ ಮಾಡತಕ್ಕದ್ದು ಅದು ಸರಿಯಾಗುವುದಿಲ್ಲ. ಅದು ಕಡತಕ್ಕೂ ಹೋಗಬಾರದು. ಏಕೆಂದರೆ ಯಾವ ಹೇಳಿಕೆಯನ್ನೂ ನಾವು ಪತ್ರಿಕೆಗಳಲ್ಲಿ ಈ ವಿಚಾರದ ಬಗ್ಗೆ ನೋಡಲಿಲ್ಲ. ತಾವು ಅದನ್ನು ಕಡತದಿಂದ ತೆಗೆಸಿಹಾಕುವುದು ಒಳ್ಳೆಯದು ಮತ್ತು ಮಾನ್ಯ ಸದಸ್ಯರಲ್ಲಿ ಕೂಡ ನನ್ನ ಒಂದು ವಿನಯಪೂರ್ವಕ ವಿನಂತಿ ಏನೆಂದರೆ ನಾವು ಅದನ್ನು ಪ್ರಸ್ತಾಪಿಸುವುದು ಬೇಕಾಗಿಲ್ಲ. ನೀವು ಹೆಸರನ್ನು ಪ್ರಸ್ತಾಪಿಸಬೇಕಾಗಿಲ್ಲ, ನಾವು ಏನು ಆಯಿತು, ಏನು ಆಗಬಾರದಾಗಿತ್ತು ಎಂಬುದನ್ನು ಪ್ರಸ್ತಾಪ ಮಾಡೋಣ. ಹೆಸರನ್ನು ಪ್ರಸ್ತಾಪಿಸುವುದು ಸಾಧುವಾಗುವುದಿಲ್ಲ.

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೇ, ಶ್ರೀ ಮಹದೇವ್ ಅವರು ಮಾತನಾಡಬೇಕಾದರೆ **(ಶ್ರೀನಿವಾಸ ಪ್ರಸಾದ್) ಹೆಸರನ್ನು ಪ್ರಸ್ತಾಪ ಮಾಡಬಾರದು ಎಂದು ಪಾಯಿಂಟ್ ಆಫ್ ಆರ್ಡರ್ ಅನ್ನು ನಾನು ಎತ್ತಿದ್ದೆ. ಆದರೂ ಸಹ ನನ್ನ ಪಾಯಿಂಟ್ ಆಫ್ ಆರ್ಡರ್‌ಗೆ ಗಮನ ಕೊಡದೆ ಅವತ್ತು ಎಲ್ಲಾ ವಿಚಾರಗಳನ್ನು ಮಾಡುತ್ತಿದ್ದಾರೇನೋ ಎನ್ನುವಂತಹ ಒಂದು ಸವಿಸ್ತಾರ ಭಾಷಣವನ್ನು ಮಾನ್ಯ ಮಹದೇವ್ ಅವರು ಮಾಡಿದರು. ಅದೂ ಸಹ ರೆಕಾರ್ಡ್‌ಗೆ

ಹೋಗಿದೆ. ನಾನೇ ಆವತ್ತು ಅವರು ಇಲ್ಲದಿದ್ದಾಗ ಅದನ್ನು ಪ್ರಸ್ತಾಪ ಮಾಡಬಾರದೆಂದು ಪಾಯಿಂಟ್ ಆಫ್ ಆರ್ಡರ್ ಎಂದು ಹೇಳಿದರೂ ಸಹಿತ ಅದನ್ನು ಮುಂದುವರಿಸಿದ್ದೀರಿ. ಹಾಗಾಗಿ ಇದಕ್ಕೆಲ್ಲಾ ಕಾರಣವಾಯಿತು. ಆವತ್ತೇ ಅದನ್ನು ತಾವು ನಿಲ್ಲಿಸಿಬಿಟ್ಟಿದ್ದರೆ ಇವತ್ತು ಆ ಮೆರವಣಿಗೆ ಆಗುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ.

ಶ್ರೀ ಕಾಗೊಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ, ಅದನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಈ ಸದನದಲ್ಲಿ ಮಾತನಾಡಿದಂತಹ ಸದಸ್ಯರ ಬಗ್ಗೆ ಕೆಲವರ ಬಗ್ಗೆ ಧಿಕ್ಕಾರ ಇರತಕ್ಕದ್ದು, ಕೆಲವರ ಬಗ್ಗೆ ಜೈಕಾರ ಹೇಳತಕ್ಕದ್ದು, ಇದನ್ನು ಗಮನಿಸಿದರೆ ಇದರಲ್ಲಿ ಜಾತಿಯ ಬಣ್ಣ ಕಟ್ಟಿ, ಈ ಘಟನೆಗೆ ಬೇರೆ ರೂಪಕ್ಕೆ ತಿರುಗಿಸುವಂತಹ ಸನ್ನಿವೇಶ ಇದೆ, ಸಂದರ್ಭವಿದೆ.

(** ಅಧ್ಯಕ್ಷರ ಆದೇಶದಂತೆ ಕಡತದಿಂದ ತೆಗೆದುಹಾಕಲಾಗಿದೆ.)

12.45 ಪಿ. ಎಂ.

ಆದುದರಿಂದ, ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ದಯವಿಟ್ಟು ಅಲ್ಲಿಗೆ ಒಂದು ಟೀಮನ್ನು ಕಳುಹಿಸಿ. ಈ ಜಾತಿ ಬಣ್ಣವನ್ನು ಹಚ್ಚಿ ಮತ್ತೆ ಇದಕ್ಕೆ ಈ ಪ್ರತಿಕಾರ ಬೇರೆ ಮಾರ್ಗಕ್ಕೆ ಹೋಗದ ರೀತಿಯಲ್ಲಿ ತಡೆಯತಕ್ಕಂತಹ ಒಂದು ಪ್ರಯತ್ನವನ್ನು ಮಾಡಬೇಕು. ಈಗ ಏನಾಗಿದೆಯೆಂದರೆ, ಶ್ರೀಮತಿ ಮೋಟಮ್ಮನವರ ಪ್ರಶ್ನೆ ಬಂತು. ಅವರು ಮೈಸೂರು ಜಿಲ್ಲೆಯಲ್ಲಿ ಸಂಬಂಧವನ್ನು ಇಟ್ಟುಕೊಂಡಿದ್ದಾರೆ. ಅವರು ಇಲ್ಲಿ ಮಾತನಾಡಿ, ಮೈಸೂರಿಗೇನಾದರೂ ಅವರು ಹೋದಂತಹ ಸಂದರ್ಭದಲ್ಲಿ ಅವರ ವಿರುದ್ಧ ಇದೇ ರೀತಿ ಪ್ರತೀಕಾರ ಮಾಡುವಂತಹ ಸನ್ನಿವೇಶ, ಸಂದರ್ಭ ಬಂದರೆ ಅವರು ಹೇಗೆ ನಿರ್ಭಯವಾಗಿ, ನಿರ್ಭೀತಿಯಿಂದ ಈ ಸದನದಲ್ಲಿ ಕೆಲಸ ಮಾಡಬೇಕು ಎಂದು ನಾವು ಆಲೋಚನೆ ಮಾಡಬೇಕಾಗಿದೆ. ಅವರು ಈ ಸಮಾಜದಲ್ಲಿ ನಡೆದುಬಂದಿರುವಂತಹ ಶೋಷಣೆಯನ್ನು ಅನುಭವಿಸಿ ತಮ್ಮ ಕಷ್ಟ ಮತ್ತು ನೋವನ್ನು ಇಲ್ಲಿ ತೋಡಿಕೊಂಡಿದ್ದಾರೆ. ಇವತ್ತು ಅದನ್ನು ನಾವು ಅವರ ದೃಷ್ಟಿಯಿಂದ ನೋಡಿ ಆಲೋಚನೆ ಮಾಡಿ ಸಹನೆಯಿಂದ ನೋಡಬೇಕೇ ವಿನಃ ಅದಕ್ಕೆ ಪ್ರತೀಕಾರ ಹೇಳುವಂತಹ ಒಂದು ವಾತಾವರಣ ಎಲ್ಲೇ ಆಗಲಿ, ಯಾವ ಭಾಗದಲ್ಲೇ ಆಗಲಿ ನಡೆದರೆ ಅದನ್ನು ಖಂಡಿಸಬೇಕಾಗುತ್ತದೆ. ಮತ್ತು ಅದರ ಹಿಂದೆ ಯಾರಿದ್ದಾರೆ ಅಂತಹವರಿಗೆ ಕೂಡ ಬುದ್ಧಿ ಹೇಳಿ ಈ ರೀತಿ ಕೈ ಹಾಕುವುದಕ್ಕೆ ಹೋಗಬೇಡಿ ಎಂದು ಹೇಳಬೇಕು. ಮತ್ತು ಸರ್ಕಾರ ಕೂಡ ಇದರ ಬಗ್ಗೆ ನಿಗಾ ವಹಿಸಿ ತಕ್ಷಣ ಕಾರ್ಯಕ್ರಮ ಕೈಗೊಳ್ಳಬೇಕು ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

* ಶ್ರೀ ಎಸ್. ಚಿಕ್ಕಮಾಧು : ಸನ್ಮಾನ್ಯ ಅಧ್ಯಕ್ಷರೇ, ಆ ದಿನ ನಾವು ಕರ್ನಾಟಕ ವಿಧಾನ ಮಂಡಲ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಸಮಿತಿಯ ಸದಸ್ಯರುಗಳು ಶ್ರೀಮತಿ ಮೋಟಮ್ಮನವರ ನೇತೃತ್ವದಲ್ಲಿ ಬದನವಾಳ ಗ್ರಾಮಕ್ಕೆ ಬೇಟಿ ಕೊಟ್ಟೆವು. ಆ ಸಂದರ್ಭದಲ್ಲಿ ಶ್ರೀಮತಿ ಮೋಟಮ್ಮನವರು ಮತ್ತು ನಾವೆಲ್ಲರೂ ಕೂಡ ಸಭೆ ಸೇರಿ ಅಲ್ಲಿ ಆದಂತಹ ಘಟನೆಗಳ ಬಗ್ಗೆ ಉಭಯಸ್ತರೂ ಕೂಡ ವಿಚಾರ ವಿನಿಮಯ ಮಾಡಿ ಅವರು ಅಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು. ನೀವುಗಳು ನಮ್ಮ ಹರಿಜನ ಭಾಂದವರು ಏನು ಇದ್ದೀರಿ, ನೀವು ಯಾವುದೇ ಸಂದರ್ಭದಲ್ಲೂ ಕೂಡ ಬೇರೆಯವರ ಎಂದರೆ ಸವರ್ಣೀಯರ ಮೇಲೆಯಾಗಲಿ, ಇತರರ ಮೇಲೆಯಾಗಿರಲಿ, ಕಾನೂನು ಬಾಹಿರವಾಗಿ ಮಾತನಾಡುವುದಾಗಲಿ ಅಥವಾ ಇತರ ಯಾವುದೇ ಒಂದು ಧರ್ಮದ ವಿರುದ್ಧ, ಸವರ್ಣೀಯರನ್ನು ವಿರೋಧ

ಮಾಡತಕ್ಕಂಥದ್ದನ್ನು ನಾವು ವಿರೋಧಿಸುತ್ತೇವೆ. ಉದಾಹರಣೆಯಾಗಿ ದಲಿತ ಸಂಘ ಸಂಸ್ಥೆಗಳು ಅನೇಕ ಒಳ್ಳೆಯ ಕೆಲಸ ಕಾರ್ಯಗಳನ್ನು ಕೂಡ ಹಮ್ಮಿಕೊಂಡಿವೆ. ಅದಕ್ಕೆ ನನಗೆ ಹೆಮ್ಮೆ ಇದೆ ಎಂದು ಹೇಳಿದರು. ಆದರೆ ಕೆಲವು ಸಾರಿ ಇವರೂ ಕೂಡ ಕೆಲವು ವಿಚಾರದ ಬಗ್ಗೆ ಪ್ರಚೋದನೆ ಮಾಡುತ್ತಾರೆ. ಅಂತಹ ವಿಚಾರಗಳಿಗೆ ತಾವು ಯಾರೂ ಕೂಡ ಗಮನ ಕೊಡಬಾರದು. ಅವರು ಹೇಳತಕ್ಕಂತಹ ಒಳ್ಳೆಯ ಮಾತುಗಳನ್ನು ಒಳ್ಳೆಯ ಕಾರ್ಯಕ್ರಮಗಳನ್ನು ನೀವು ಹಮ್ಮಿಕೊಳ್ಳಬೇಕು, ನೀವು ಒಳ್ಳೆಯ ಕೆಲಸಕ್ಕೆ ಹೋಗಬೇಕು ಎಂದು ಹೇಳಿ ಆ ಒಂದು ಜನಾಂಗದ ಏಳಿಗೆಗೋಸ್ಕರ ಇರತಕ್ಕಂತಹ ವಿವಿಧ ಸಂಘ ಸಂಸ್ಥೆಗಳಿಗೆ ಅವರು ಈ ಮಾತನ್ನು ನೇರವಾಗಿ ಪ್ರಸ್ತಾಪ ಮಾಡಿದ್ದಾರೆ. ನಾನೂ ಕೂಡ ವಿಚಾರವನ್ನು ಪ್ರಸ್ತಾಪ ಮಾಡಿದಾಗ ನೇರವಾಗಿ ಹೇಳಿದ್ದೇನೆ. ಕೆಲವು ಸಾರ್ವತ್ರಿಕವಾಗಿರತಕ್ಕಂತಹ ಕ್ಷೇತ್ರಗಳಿಗೆ ಉದಾಹರಣೆಯಾಗಿ ಹೇಳುವುದಾದರೆ ತಿರುಪತಿಯ ವೆಂಕಟಾಚಲ ದೇವಸ್ಥಾನ, ಧರ್ಮಸ್ಥಳದ ಮಂಜುನಾಥ ಸ್ವಾಮಿ ದೇವಸ್ಥಾನ, ಮಂತ್ರಾಲಯದ ರಾಘವೇಂದ್ರ ಸ್ವಾಮಿ ದೇವಸ್ಥಾನಗಳಿಗೆ ಯಾರು ಬೇಕಾದರೂ ಕೂಡ ಪ್ರವೇಶ ಮಾಡಬಹುದು. ಪ್ರತಿಯೊಬ್ಬರೂ ಕೂಡ ಅಲ್ಲಿಗೆ ಹೋಗಬಹುದು. ಆದರೆ ನಿರ್ದಿಷ್ಟವಾಗಿ ಯಾವುದೇ ಒಂದು ಊರಿನಲ್ಲಿ ಒಂದೇ ಧರ್ಮಕ್ಕೆ ಸೇರಿದಂತಹ ವ್ಯಕ್ತಿಗಳು ನಮ್ಮದೇ ದೇವರು ಎಂದು ಅಲ್ಲಿ ಪೂಜೆ ಸಲ್ಲಿಸುತ್ತಿದ್ದರೆ ಅಲ್ಲಿಗೂ ನಾವು ಪ್ರವೇಶ ಮಾಡತಕ್ಕಂಥಾದ್ದು ಸೂಕ್ತವಾದುದ್ದಲ್ಲ. ಆ ದೇವರನ್ನು ಅವರೇ ಪೂಜೆ ಮಾಡಿಕೊಳ್ಳಲಿ. ನಮಗೆ ಎಲ್ಲಿ ಸಾರ್ವತಿಕವಾಗಿ ಪ್ರವೇಶ ಇದೆ ಅಂತಹ ಕಡೆ ಮಾತ್ರ ನಾವು ದೇವರಿಗೆ ಪೂಜೆ ಸಲ್ಲಿಸೋಣ. ನಾವೂ ಕೂಡ ಕೆಲವು ವಿಚಾರಗಳಲ್ಲಿ ಹಠ ಮಾಡಬಾರದು ಎನ್ನುವಂತಹ ಮಾತನ್ನು ಗುಟ್ಟಾಗಿ ಆ ಜನಾಂಗದ ಮುಖಂಡರಿಗೆ ಅವರು ಹೇಳಿದ್ದಾರೆ. ಅಲ್ಲಿ ಮಾನ್ಯ ಮುಖ್ಯಮಂತ್ರಿಗಳಾದಂತಹ ವೀರಪ್ಪ ಮೊಯಿಲಿ ಅವರಿಗೆ ಧಿಕ್ಕಾರ ಏಕೆ ಕೂಗಿದರು ಎಂದರೆ ಇಂತಹ ಘಟನೆಗಳು ಅನೇಕ ಕಡೆಗಳಲ್ಲಿ ನಡೆದಿದ್ದರೂ ಕೂಡ ಯಾವುದೇ ವಿಚಾರದ ಬಗ್ಗೆ ಕೇವಲ ಸಿಒಡಿ ತನಿಖೆಯನ್ನು ನೇಮಿಸುತ್ತಿದ್ದಂತಹ ಮುಖ್ಯಮಂತ್ರಿಯವರು ವಿಶೇಷವಾಗಿ ಈ ಬದನವಾಳು ಗ್ರಾಮಕ್ಕೆ ಸಂಬಂಧಪಟ್ಟ ಘಟನೆಯ ಬಗ್ಗೆ ಏಕೆ ಸಿಬಿಐ ತನಿಖೆಗೆ ಒಪ್ಪಿಸಿದರು ಅದನ್ನು ಖಂಡಿಸಿ ಅವರ ವಿರುದ್ಧ ದಿಕ್ಕಾರ ಕೂಗಿದ್ದಾರೆ. ಆದರೆ ವಿಚಾರಗಳು ಅಗಾಧವಾದಾಗ, ಆ ವಿಚಾರದ ಸತ್ಯಾಂಶವನ್ನು ಹೊರತರಬೇಕಾದಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಒಂದು ವ್ಯಾಪ್ತಿಯೊಳಗೆ ಬರತಕ್ಕಂತಹ ವಿಚಾರವನ್ನು ಸಿಬಿಐ ತನಿಖೆಗೆ ಒಪ್ಪಿಸಿದ್ದಾರೆ. ಅವರು ಈ ರೀತಿ ಒಪ್ಪಿಸಿದ್ದಕ್ಕೋಸ್ಕರ ಅವರ ವಿರುದ್ಧ ಕೂಗಿದರು. ನಾವುಗಳು ಹೋಗಿ ಅವರಿಗೆ ತಿಳುವಳಿಕೆಯನ್ನು ಹೇಳಿದೆವು. ಶ್ರೀಮತಿ ಮೋಟಮ್ಮ ಮತ್ತು ಇತರ ಸದಸ್ಯರ ಮೇಲೆ ಧಿಕ್ಕಾರವನ್ನು ಕೂಗತಕ್ಕಂತಹ ವಿಚಾರವನ್ನು ಖಂಡಿಸಬೇಕಾಗುತ್ತದೆ. ಸವರ್ಣೀಯ ಎನ್ನುವ ಪದಕ್ಕೆ ತಾವು ಇಂಗ್ಲೀಷ್‌ನಲ್ಲಿ - ಕ್ಯಾಸ್ಟ್‌ಹಿಂದೂಸ್ ಎಂದು ಹೇಳುತ್ತೀರಿ. ಆದರೆ ಇದು ಬಿಟ್ಟು ಮತ್ತೆ ಯಾವ ಪದ ಇದಕ್ಕೆ ಉಪಯೋಗಿಸಬೇಕಾಗುತ್ತದೆ. ಪ್ರತ್ಯೇಕವಾಗಿ ಜಾತಿ ಹೆಸರು ಹಿಡಿದರೆ ಜಾತಿಯ ಹೆಸರು ಹಿಡಿದಿರು ಎಂದು ಹೇಳುತ್ತಾರೆ. ಸವರ್ಣೀಯರು ಎಂದು ಕನ್ನಡದಲ್ಲಿ ಇರತಕ್ಕಂತಹ ಪದ ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ಆ ಪದ ಅಲ್ಲ ಬೇರೆ ಯಾವ ಪದವನ್ನು ಉಪಯೋಗಿಸಬೇಕು ಎಂದು ತಾವು ಹೇಳಿದರೆ ಆ ಪದವನ್ನು ನಾವು ಇನ್ನು ಮುಂದೆ ಖಂಡಿತವಾಗಿಯೂ ಕೂಡ ಬಳಸುತ್ತೇವೆ.

* ಶ್ರೀ ಕೆ. ಶಿವಮೂರ್ತಿ : ಮಾನ್ಯ ಅಧ್ಯಕ್ಷರೇ, ನನಗೆ ಒಂದು ದೊಡ್ಡ ಅನುಮಾನ ಬಂದಿದೆ. ಈ ಸದನದಲ್ಲಿ ಮುಂದೆ ಬರತಕ್ಕಂತಹ ದಿವಸಗಳಲ್ಲಿ ನಾವು ಸದಸ್ಯರಾಗಿ ಕೆಲಸ ಮಾಡುವುದಕ್ಕೆ ಬಹಳ ಕಷ್ಟವಾಗುತ್ತದೆ. ಇಂತಹ ವಿಚಾರಗಳು, ಇಂತಹ ಘಟನೆಗಳು ಹಿಂದೆಯೂ ಕೂಡ ಆಗಿದೆ. ಮುಂದೆಯೂ ಕೂಡ ಆಗುತ್ತವೆ ಎನ್ನುವ ಅನುಮಾನ ಇದೆ. ಆದರೆ ಇಲ್ಲಿ ಪ್ರಶ್ನೆ ಏನೆಂದರೆ ಇದನ್ನು ನಾನು ಇಲ್ಲಿ ಪ್ರಸ್ತಾಪ ಮಾಡಿದರೆ ನನಗೆ ರಕ್ಷಣೆ ಇದೆಯೇ ಇಲ್ಲವೇ, ಇದು ನನ್ನ ಹಕ್ಕಿನ ಪ್ರಶ್ನೆ. ಆದ್ದರಿಂದ ದಯಮಾಡಿ ತಾವು ನಮ್ಮ ರಕ್ಷಣೆಗೆ ಬರಬೇಕಾಗುತ್ತದೆ.

ಶ್ರೀಮತಿ ಮೋಟಮ್ಮನವರು, ಶ್ರೀಮತಿ ಮಲ್ಲಾಜಮ್ಮನವರು, ಮಾನ್ಯ ಕರಿಯಣ್ಣನವರು ಇವತ್ತು ಏನು ಪ್ರಸ್ತಾಪ ಮಾಡಿ ಚರ್ಚೆ ಮಾಡಿದರೋ ಅದನ್ನು ಬಹಳ ನೋವಿನಿಂದ ಪ್ರಸ್ತಾಪ ಮಾಡಿದ್ದಾರೆ. ಇಂತಹ ಘಟನೆಗಳು ಆದಾಗ ನಾವು ಪ್ರಸ್ತಾಪ ಮಾಡಿ ಹೊರಗಡೆ ಹೋದರೆ ನಮ್ಮ ಮಾನಕ್ಕಾಗಿ ಅಥವಾ ಜೀವಕ್ಕಾಗಿ ರಕ್ಷಣೆ ಇಲ್ಲ ಎನ್ನುವಂತಹ ಪ್ರಶ್ನೆಯನ್ನು ತಮ್ಮ ಮೂಲಕ ನಾನು ಈ ಸದನಕ್ಕೆ ಕೇಳುತ್ತಿದ್ದೇನೆ. ಇದು ಬಹಳ ಗಂಭೀರವಾಗಿರತಕ್ಕಂಥ ವಿಚಾರ. ಈ ವಿಚಾರದ ಬಗ್ಗೆ ಯಾವ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ, ಅವರ ಪ್ರಾಣಕ್ಕೆ ಏನು ಆಗುತ್ತದಯೋ ಅವರ ಮಾನಕ್ಕೆ ಏನು ಆಗುತ್ತದೆಯೋ ಅಥವಾ ಅವರು ಯಾರೇ ಇರಲಿ, ಇವತ್ತು ಪತ್ರಿಕೆಯಲ್ಲಿ ಇರುವಂತಹ ಪತ್ರಿಕಾ ಮಿತ್ರರು ಇವರ ವರದಿಯನ್ನು ಮನಬಿಚ್ಚಿ ವರದಿ ಮಾಡುವುದಕ್ಕೆ ಆಗುವುದಿಲ್ಲ. ಏಕೆಂದರೆ, ನಾಳೆ ಅವರ ಪ್ರಾಣಕ್ಕೆ ರಕ್ಷಣೆ ಬೇಕಾಗುತ್ತದೆ. ಆ ದೃಷ್ಟಿಯಿಂದ ದಯಮಾಡಿ ಇಂತಹ ಗಂಭೀರವಾಗಿರತಕ್ಕಂತಹ ವಿಚಾರವನ್ನು ಆಡಳಿತ ಪಕ್ಷದವರು ಮತ್ತು ವಿರೋಧ ಪಕ್ಷದವರು ಇಬ್ಬರೂ ಸೇರಿ ತೀರ್ಮಾನವನ್ನು ಮಾಡಬೇಕಾಗುತ್ತದೆ. ಇದು ಹಕ್ಕಿನ ಪ್ರಶ್ನೆಯಾಗುತ್ತದೆ. ಈಗಿನ ಸಂದರ್ಭದಲ್ಲಿ ಇಂಥ ಕಗ್ಗೊಲೆಗಳು ನಡೆಯುತ್ತಿರತಕ್ಕಂಥದ್ದು ಇದು ಶೋಭೆ ತರತಕ್ಕಂಥದ್ದಲ್ಲ. ನಾಗರೀಕ ಸಮಾಜ ಎಂದು ಅಂದುಕೊಂಡಿರತಕ್ಕಂಥ ಸಮಾಜಕ್ಕೆ ನಾಚಿಕೆಯಾಗಿರತಕ್ಕಂಥ ಒಂದು ಘಟನೆ ಇದು. ದಯಮಾಡಿ ಇದನ್ನು ಮಾನವೀಯತೆ ದೃಷ್ಟಿಯಿಂದ ತಾವು ವಿಚಾರ ಮಾಡಬೇಕಾಗುತ್ತದೆ. ಮಾನವೀಯ ದೃಷ್ಟಿಯಿಂದ ಇದನ್ನು ತೀರ್ಮಾನ ಮಾಡಬೇಕಾಗುತ್ತದೆ. ದಯಮಾಡಿ ಈ ಎರಡು ವಿಚಾರಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಇದನ್ನು ಸಿಬಿಐಗೆ ಈಗಾಗಲೇ ರೆಫರ್ ಮಾಡಿದ್ದಾರೆ. ಇದಕ್ಕಿಂತ ಅಂತಿಮವಾಗಿರತಕ್ಕಂಥದ್ದು ಇನ್ನಾವುದೂ ಇಲ್ಲ. ಸಿಬಿಐಗಿಂತ ಅಂತಿಮವಾಗಿರತಕ್ಕಂಥ ವಿಂಗ್ ಯಾವುದೂ ಇಲ್ಲ. ದಯಮಾಡಿ ಇಂಥ ಸಂದರ್ಭದಲ್ಲೂ ಇದಕ್ಕಿಂತ ಮೇಲ್ಪಂಕ್ತಿಯಾಗಿರತಕ್ಕಂಥ ಯಾವುದಾದರೂ ಒಂದು ತನಿಖೆ ಮಾಡತಕ್ಕಂಥದ್ದು ಸಮಾಧಾನ ಮಾಡತಕ್ಕಂಥದ್ದಕ್ಕೆ ಈ ಸದನ ಇದೆ. ತಾವೆಲ್ಲಾ ಇದ್ದೀರಿ. ಎಲ್ಲಾ ರಾಜಕೀಯ ಪಕ್ಷಗಳ ಹೋರಾಟಗಾರರೂ ಇದ್ದೀರಿ. ಈ ಒಂದು ಹರಿಜನ ಕಗ್ಗೊಲೆಗಳು ದಿವಸ ದಿವಸಕ್ಕೆ ನಿಮಿಷ ನಿಮಿಷಕ್ಕೆ ಆಗತಕ್ಕಂಥದ್ದು ಆದರೆ ಈ ಒಂದು ಸಮಸ್ಯೆಗಳನ್ನು ಈ ಸದನದಲ್ಲಿ ಮಾತನಾಡಬಾರದು ಎಂದು ಹೇಳಿದರೆ ಮಾತನಾಡಬಾರದು ಎಂದು ಹೇಳತಕ್ಕಂಥ ಒಂದು ಹೊಸ ಸಂಸ್ಕೃತಿಯಾದರೆ ಇದು ಭಾರೀ ಕಷ್ಟವಾಗುತ್ತದೆ. ದಯಮಾಡಿ ಇದರ ಬಗ್ಗೆ ಎಲ್ಲರೂ ಮನಬಿಚ್ಚಿ ವಿಚಾರ ಮಾಡಬೇಕು. ನಾನು ಮಾತನಾಡತಕ್ಕಂತಹ ಸಂದರ್ಭದಲ್ಲಿ ಮಾನ್ಯ ಸದಸ್ಯರುಗಳು ಗಂಭೀರವಾಗಿ ನೋಡುತ್ತಿದ್ದಾರೆ. ಯಾರೂ ಮನಬಿಚ್ಚಿ ಕೆಲವರು ಮಾತನಾಡುವುದಕ್ಕೆ ತಯಾರಿಲ್ಲ. ಕೆಲವರು ಮನಬಿಚ್ಚಿ ಮಾತನಾಡಿದರೆ ಏನಾಗುತ್ತದೆಯೋ ಎಂದು ಹೆದರಿಕೆ, ಅನುಮಾನ. ದಯಮಾಡಿ ಈ ಒಂದು ಅಂಶದ ದೃಷ್ಟಿಯಿಂದ ತಾವು ದೃಷ್ಟಿಕೋನ ಇಟ್ಟುಕೊಂಡು ವಿಚಾರ ಮಾಡಿ ಈ ತೀರ್ಮಾನಕ್ಕೆ ಬರಬೇಕು ಎಂದು ನಾನು ಆಡಳಿತ ಪಕ್ಷದ ಮಾನ್ಯ ಸಭಾನಾಯಕರಿಗೆ ಹಾಗೂ ವಿರೋಧಪಕ್ಷದ ನಾಯಕರಿಗೆ ಎಲ್ಲಾ ರಾಜಕೀಯ ಮುಖಂಡರುಗಳಿಗೆ ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಆರ್. ವಿ. ದೇಶಪಾಂಡೆ : ತಾವೆಲ್ಲರಿಗೂ ಅವಕಾಶವನ್ನು ಕೊಟ್ಟಿರಿ. ಬಹಳ ಗಂಭೀರ ಸಮಸ್ಯೆ ಇದೆ. ಯಾವುದೋ ಒಂದು ಸದಸ್ಯರು ಇಲ್ಲಿ ಪ್ರಸ್ತಾಪ ಮಾಡಿದ ವಿಚಾರಕ್ಕೆ ಅಜಿಟೇಷನ್ ಆಗುತ್ತಿರುವಾಗ ಯಾವ ಪ್ರಕಾರ ಮುಂದೆ ನಡೆಯಬೇಕು ಎಂದು ನಾಲ್ಕು ಮಾತುಗಳನ್ನು ಹೇಳಿದರೆ ಅವರು ಹೇಳಲಿ. ಅವರ ವಿಚಾರ ಏನಿದೆ ಎಂದು ಅವರೂ ಹೇಳಲಿ.

* ಶ್ರೀ ಹೆಚ್. ವಿಕಾಂತಯ್ಯ : ಮಾನ್ಯ ಅಧ್ಯಕ್ಷರೇ, ಈಗ ಬದನವಾಳು ಗ್ರಾಮದಲ್ಲಿ ನಡೆದಂಥ ಘಟನೆ ಈ ಸದನದಲ್ಲಿ ಎಲ್ಲಾ ಜಾತಿಯ ಪ್ರಗತಿಪರ ಪ್ರತಿನಿಧಿಗಳು ಎಲ್ಲಾ ಪಕ್ಷದಲ್ಲಿರುವಂಥ ಜನರೂ ಸಹ ಇದನ್ನು ಖಂಡನೆ ಮಾಡಿದ್ದಾರೆ, ಇದರಲ್ಲಿ ಎರಡನೇ ಮಾತಿಲ್ಲ.

ಆದರೆ ಇಂಥ ಘಟನೆಗಳು ಮರುಕಳಿಸದಂತೆ ನಾವು ಪ್ರಯತ್ನವನ್ನು ಮಾಡಬೇಕಾಗಿದೆ. ಶತ ಶತಮಾನಗಳಿಂದ ಶೋಷಣೆಗೆ ಒಳಗಾದಂಥ ಜನರು ಏನು ಇವತ್ತಿನದಿವಸ ಆ ಒಂದು ಶೋಷಣೆಯನ್ನು ಪ್ರತಿಭಟಿಸುತ್ತಾರೆ, ಅದನ್ನು ತಪ್ಪು ಎಂದು ಹೇಳುವಂಥ ಅಮಾನವೀಯ ಶಕ್ತಿ ನಮಗ್ಯಾರಿಗೂ ಇಲ್ಲ. ಹಾಗಿದ್ದರೆ, ನಾವ್ಯಾರೂ ಸಹ ಮನುಷ್ಯರು ಎಂದು ಹೇಳಿಕೊಳ್ಳುವುದಕ್ಕೆ ತಕ್ಕವರೂ ಅಲ್ಲ. ಆದರೆ ಇವತ್ತಿನ ದಿವಸ ಇಂಥ ಚಳುವಳಿಗಳು ಅಥವಾ ಪ್ರತಿಚಳುವಳಿಗಳು ಏನಿವೆ, ಇದರ ಲಾಭವನ್ನು ರಾಜಕೀಯವಾಗಿ ಪಡೆಯುವುದಕ್ಕೆ ಪ್ರಯತ್ನವಾಗಬಾರದು. ಸರ್ಕಾರವಾಗಲಿ, ಜನತೆಯ ಪ್ರತಿನಿಧಿಗಳಾಗಲಿ ನಾವು ಜಾತಿವಾದಿಗಳಾಗಿ ಈ ಒಂದು ಸದನದಲ್ಲಿ ಬಂದಿಲ್ಲ. ಜನರಿಂದ ಆಯ್ಕೆಯಾದಂಥ ಪ್ರತಿನಿಧಿಗಳು ನಾವು ಇಲ್ಲಿಗೆ ಬಂದಿದ್ದೇವೆ. ಯಾರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಯಾರು ಶೋಷಣೆಗೆ ಒಳಗಾಗಿದ್ದಾರೆ, ಇವತ್ತೂ ಸಹ ಯಾರು ಶೋಷಣೆಗೆ ಒಳಗಾಗಿದ್ದಾರೆ, ಅವರ ಪರ ನಮ್ಮ ಧ್ವನಿಯನ್ನು ಎತ್ತಬೇಕಾದದ್ದು ನಮ್ಮ ಕರ್ತವ್ಯ. ಆದರೆ ನಾವು ಜಾತೀಯತೆಯನ್ನು ಮಾಡಬೇಕಾಗಿಲ್ಲ. ನಾವು ಇಲ್ಲಿ ಬಂದಾಕ್ಷಣ ಏಕಾಂತಯ್ಯನವರು ಕೇವಲ ಒಂದು ಧರ್ಮಕ್ಕೆ ಸೇರಿದವರು. ಅವರ ಹಿತವನ್ನು ಕಾಪಾಡುವುದಕ್ಕೆ ಅವರು ಬಂದಿದ್ದಾರೆ ಎಂದು ತಿಳಿದುಕೊಳ್ಳುವಂಥ ರೀತಿಯಲ್ಲಿ ಮಾತನಾಡುವಂಥ ಅವಶ್ಯಕತೆ ನನಗಿಲ್ಲ. ಇವತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಗಳಾಗಲಿ, ಮಾನ್ಯ ಮಂತ್ರಿಗಳಾಗಲಿ, ಸರ್ಕಾರವಾಗಲಿ, ಎಲ್ಲವನ್ನೂ ಜಾತ್ಯಾತೀತ ದೃಷ್ಟಿಯಿಂದ ನೋಡುವಂಥ ಕೆಲಸವನ್ನು ಮಾಡಬೇಕಾಗುತ್ತದೆ. ಸರ್ಕಾರದ ನಡವಳಿಕೆಯಾಗಿರಬಹುದು, ಸದಸ್ಯರ ನಡುವಳಿಕೆಯಾಗಿರ ಬಹುದು, ನಮ್ಮ ನಮ್ಮ ನಡುವಳಿಕೆಗಳಿಂದ ನಾವು ಜಾತ್ಯಾತೀತರು ಎಂಬ ಭಾವನೆ ಸಾರ್ವಜನಿಕವಾಗಿ ಬರುವಂಥ ರೀತಿಯಲ್ಲಿ ಸಾರ್ವಜನಿಕರಿಗೆ ವಿಶ್ವಾಸ ಬರುವಂಥ ರೀತಿಯಲ್ಲಿ ನಾವು ನಡೆದುಕೊಳ್ಳಬೇಕಾಗಿದೆ. ಅದಕ್ಕೆ ಬದಲಾಗಿ ಏನಾದರೂ ಇಂಥ ಚಳುವಳಿಗಳನ್ನು ನಾವು ಜಾತೀಯ ಸ್ವರೂಪದ ಚಳುವಳಿಗಳನ್ನಾಗಿ ಮಾರ್ಪಾಡು ಮಾಡುವುದಾದರೆ ಅದಕ್ಕೆ ಪ್ರಚೋದನೆ ಮಾಡುವುದಾದರೆ ಖಂಡಿತ ಇದು ಸಲ್ಲ. ಇದರಿಂದ ಇಡೀ ಸಮಾಜದಲ್ಲಿ ವರ್ಗ ಸಂಘರ್ಷವಾಗುತ್ತದೆ. ಆ ವರ್ಗ ಸಂಘರ್ಷ ಎಂದರೆ ಕೇವಲ ಭೀಕರ ಪರಿಣಾಮವಾಗುತ್ತದೆ. ನಾವು ಶಾಸನ ಸಭಾ ಸದಸ್ಯರಾಗಿ ಬಂದಿರುವುದು ಅಥವಾ ಸರ್ಕಾರ ಇರುವುದು ಯಾರು ನೋಡಿದವರಿದ್ದಾರೆ, ಯಾರು ಶೋಷಣೆಗೆ ಒಳಗಾಗಿದ್ದಾರೆ ಅವರ ಹಿತವನ್ನು ಕಾಪಾಡಬೇಕು ಎಂಬ ಬಗ್ಗೆ ಎರಡನೇ ಮಾತಿಲ್ಲ. ಆದರೆ ಅದನ್ನು ರಾಜಕೀಯ ನೆಪವನ್ನಾಗಿ ಮಾಡಿಕೊಂಡು ನಮ್ಮ ನಮ್ಮ ಬೇಳೆಗಳನ್ನು ಬೇಯಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದರೆ ಅದನ್ನು ಹತ್ತಿಕ್ಕುವಂತಹ ಪ್ರಯತ್ನವನ್ನು ಸರ್ಕಾರ ಮಾಡಬೇಕಾಗುತ್ತದೆ. ಒಂದು ಪಕ್ಷ ಸರ್ಕಾರದಲ್ಲಿರುವಂತಹ ಜನ ಆಗಿರಬಹುದು ಅಥವಾ ನಮ್ಮಂಥಹ ಪ್ರತಿನಿಧಿಗಳು ಆಗಿರಬಹುದು. ನಾವೇನಾದರೂ ಜಾತಿವಾದಿಗಳು ಎಂಬ ರೀತಿಯಲ್ಲಿ ನಮ್ಮ ನಡವಳಿಕೆಗಳು ಕಂಡು ಬಂದರೆ ಇಂತಹ ಘರ್ಷಣೆಗಳನ್ನು ನಿಲ್ಲಿಸುವುದಕ್ಕೆ ಸಾಧ್ಯವೇ ಇಲ್ಲ. ಅದಕ್ಕೆ ಬದಲಾಗಿ ಇಂತಹ ಸಂಘರ್ಷಗಳು ರಾಜ್ಯದಲ್ಲಿ ಮತ್ತೂ ಹೆಚ್ಚಾಗಿ ನಡೆಯುವುದಕ್ಕೆ ಸಾಧ್ಯವಿದೆ. ನಾನು ಇವತ್ತಿನ ದಿವಸ ಇನ್ನೊಂದು ಪ್ರಶ್ನೆಯನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ಕೇವಲ ಇದು ಕರ್ನಾಟಕ ರಾಜ್ಯಕ್ಕೆ ಮಾತ್ರ ಸೀಮಿತವಾಗಿಲ್ಲ. ಕರ್ನಾಟಕದಲ್ಲಿರುವಂತಹ ಲಿಂಗಾಯಿತರಿಗೆ, ಒಕ್ಕಲಿಗರಿಗೆ, ಮತ್ತು ಸವರ್ಣೀಯರಿಗೆ ಮಾತ್ರ ಸೀಮಿತ ಆಗಿಲ್ಲ. ನಮ್ಮ ರಾಜ್ಯದಲ್ಲಿರುವಂತಹ ಸಾಮಾಜಿಕ ಒಂದು ವ್ಯವಸ್ಥೆ ಏನು ಇದೆ, ಇದು ಇಡೀ ರಾಷ್ಟ್ರದಲ್ಲಿದೆ, ಬಿಹಾರದಲ್ಲಿ ಇದೆ, ಉತ್ತರ ಪ್ರದೇಶದಲ್ಲಿದೆ ಹಾಗೂ ಬೇರೆ ಬೇರೆ ರಾಜ್ಯದಲ್ಲಿದೆ ಎಂಬುದನ್ನು ನಾವು ಮರೆಯಬಾರದು. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಇವತ್ತಿನ ದಿವಸ ಈ ಒಂದು ವರ್ಗಕ್ಕೆ ಸೇರಿದ ಜನರು ಮಾತ್ರ ಆ ಹಿತವನ್ನು ಕಾಪಾಡಬೇಕು ಎಂದು ಪ್ರಯತ್ನ ಮಾಡಿದರೆ ಅದೂ ಸಹ ತಪ್ಪು ಎನ್ನುವ ಮಾತನ್ನು ಹೇಳುತ್ತೇನೆ. ಜೀವರಾಜ್ ಒಂದಿಗೆ ನನ್ನನ್ನೂ ಸೇರಿಕೊಂಡಂತೆ ಅನೇಕ ಜನ ಪ್ರಗತಿಪರ ಜನರೊಂದಿಗೆ ಮೊದಲಿನಿಂದಲೂ ಸಹ ನಾವು ಅವರೊಂದಿಗೆ ಹೊಂದಿಕೊಂಡು ಅವರ ಹಿತವನ್ನು ಕಾಪಾಡಲಿಕ್ಕೆ ಪ್ರಾಮಾಣಿಕವಾದ

ಪ್ರಯತ್ನವನ್ನು ಮಾಡಿದ್ದೇವೆ, ಹೋರಾಟವನ್ನು ಮಾಡಿದ್ದೇವೆ. ಅಂತಹ ಜನ ಸಮಾಜದ ಎಲ್ಲಾ ವರ್ಗದಲ್ಲೂ ಇದ್ದಾರೆಂಬ ಮಾತನ್ನು ತಾವೆಲ್ಲರೂ ಮರೆಯಬಾರದು. ಇವತ್ತಿನ ದಿವಸ ಇಡೀ ರಾಷ್ಟ್ರದಲ್ಲಿ ಏನು ಪ್ರಗತಿಪರಶಕ್ತಿಗಳು ಇದ್ದಾವೆ ಅಥವಾ ಸಂಘ ಸಂಸ್ಥೆಗಳು ಏನು ಇದ್ದಾವೆ, ಅವರೆಲ್ಲರ ನೆರವನ್ನೂ ಸಹ ತೆಗೆದುಕೊಂಡು ಇಂತಹ ಜಾತಿ ಸಂಘರ್ಷಗಳನ್ನು ತಪ್ಪಿಸುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ಸರ್ಕಾರ ಮಾಡಬೇಕು. ಇದರಲ್ಲಿ ಯಾವುದೇ ವಿಧವಾದಂತಹ ತಾರತಮ್ಯವನ್ನು ಮಾಡಬಾರದು. ಪಕ್ಷಪಾತ ಮಾಡಬಾರದು. ಮತ್ತು ಜನರಲ್ಲಿ ಈ ಸರ್ಕಾರ ಪಕ್ಷಪಾತ ಮಾಡುತ್ತಾ ಇಲ್ಲ ಎಂಬ ಭಾವನೆ ಬರುವಂತಹ ರೀತಿಯಲ್ಲಿ ಸರ್ಕಾರ ಮತ್ತು ಪ್ರತಿನಿಧಿಗಳು ನಡೆದುಕೊಂಡಾಗ ಮಾತ್ರ ಇಂತಹ ಸಂಘರ್ಷಗಳನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ. ಅಂತಹ ಒಂದು ಪ್ರಾಮಾಣಿಕವಾದ ಪ್ರಯತ್ನವನ್ನು ಈ ಸದನದ ಎಲ್ಲಾ ಪಕ್ಷಗಳ ಎಲ್ಲಾ ಜಾತೀಯ ಪ್ರಗತಿ ಪರ ಸಂಸ್ಥೆಗಳು, ವ್ಯಕ್ತಿಗಳು ಅನುವು ಆಗುವಾಗುವಂತಹ ರೀತಿಯಲ್ಲಿ ಸರ್ಕಾರ ಕ್ರಮವನ್ನು ಕೈಗೊಳ್ಳಲಿ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

* ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) : ಈಗ ಮಾನ್ಯ ಸದಸ್ಯರಾದ ಕರಿಯಣ್ಣನವರು, ಲಕ್ಷ್ಮಣ್ಣಯ್ಯನವರು, ಶ್ರೀಮತಿ ಮೋಟಮ್ಮನವರು, ಶ್ರೀ ಶಿವಮೂರ್ತಿಯವರೂ ಇವರುಗಳು ಒಂದು ಹಕ್ಕುಚ್ಯುತಿ ಪ್ರಶ್ನೆಯನ್ನು ತಮಗೆ ಸೂಚನೆಯನ್ನು ಕೊಟ್ಟು ಎತ್ತಿದ್ದಾರೆ. ಅವರ ಬಗ್ಗೆ ಮಾನ್ಯ ಸದಸ್ಯರುಗಳು ಸಾಕಷ್ಟು ಈ ಪ್ರಕರಣದ ಬಗ್ಗೆ ಮೆರವಣಿಗೆಯಿಂದ ಉದ್ಭವವಾದ ಕೆಲವು ವಿಚಾರಗಳನ್ನು ವಿಶ್ಲೇಷಣೆ ಮಾಡಿ ಹೇಳಿದ್ದಾರೆ. ಸನ್ಮಾನ್ಯ ಏಕಾಂತಯ್ಯನವರು ಹೇಳಿದ ಪ್ರಕಾರ ಇದು ಬರೀ ಕರ್ನಾಟಕಕ್ಕೆ ಸೀಮಿತವಾದಂತಹ ಪಿಡುಗು ಅಲ್ಲ. ಇದೊಂದು ಇಡೀ ದೇಶಕ್ಕೇ ಹಬ್ಬಿದಂತಹ ಅರ್ಬುದ ರೋಗ. ಏಕೆಂದರೆ ಇದರಿಂದಾಗಿಯೇ ಒಂದು ರೀತಿಯ ಸಂಘರ್ಷಣೆ. ಆದ್ದರಿಂದ ಕರ್ನಾಟಕದಲ್ಲಿ ಇವತ್ತು ಒಂದು ಪ್ರತ್ಯೇಕವಾಗಿ ಆದಂತಹ ಘಟನೆಗೆ ಕಾರಣರಾದಂತಹ ವ್ಯಕ್ತಿಗಳು ಯಾರಿದ್ದಾರೆ, ಕೊಲೆ ಮಾಡಿದ್ದಾರೆ, ಅವರನ್ನು ಇವತ್ತು ಪ್ರತ್ಯೇಕವಾಗಿ ಗುರುತಿಸಿ, ಆ ಜನಾಂಗಕ್ಕೆ ಮಸಿ ಬಳಿಯತಕ್ಕದ್ದನ್ನು ಇಡೀ ಸದನ ಖಂಡಿಸಬೇಕು. That is not a correct approach ಯಾವ ರೀತಿಯಲ್ಲಿ ಮೊನ್ನೆ ನಡೆದಂತಹ ಘಟನೆಗೆ ಯಾರು ಕಾರಣೀಭೂತರಾಗಿದ್ದಾರೆ, ಕೊಲೆ ಮಾಡಿದಂತಹ ವ್ಯಕ್ತಿಗಳು, ಅವರನ್ನು ಈ ಸದನ ಒಂದೇ ಧ್ವನಿಯಿಂದ, ಒಕ್ಕೊರಲಿನಿಂದ ಹೇಗೆ ಖಂಡಿಸಿದೆ, ಅದೇ ಪ್ರಕಾರ ಯಾರಾದರೂ ವ್ಯಕ್ತಿಗಳು ಒಂದು ಜನಾಂಗವನ್ನು ಎತ್ತಿ ಹಾಕಿ ಆ ಜನಾಂಗದವರು ಕೊಂದರು ಎಂದು ಹೇಳಿ ಒಂದೇ ಕಾರಣದಿಂದ ಇಡೀ ಜನಾಂಗಕ್ಕೆ ಮಸಿ ಬಳಿಯುವುದಕ್ಕೆ ಪ್ರಯತ್ನ ಮಾಡುತ್ತಾರೆ. ಅದನ್ನೂ ಕೂಡ ನಾವು ಒಕ್ಕೊರಲಿನಿಂದ, ಒಂದೇ ಧ್ವನಿಯಿಂದ ಖಂಡಿಸಬೇಕು. ಏಕೆಂದರೆ, ಇದು ಒಳ್ಳೆಯ ಮಾತಲ್ಲ. ಏಕೆಂದರೆ ಎಲ್ಲಾ ಸಮಾಜದವರು ಇವತ್ತು ಸಮಾಧಾನದಿಂದ ನೆಮ್ಮದಿಯಿಂದ, ಸೌಹಾರ್ದದಿಂದ ಈ ದೇಶದಲ್ಲಿ ಬದುಕುತ್ತಿದ್ದೇವೆ, ಕರ್ನಾಟಕ ರಾಜ್ಯದಲ್ಲಿ ಕೂಡ ಅನ್ಯೋನ್ಯತೆಯಿಂದ ಇದ್ದಾರೆ. ಈಗ ಬದನವಾಳ ಒಂದು ನಿದರ್ಶನ ತೆಗೆದುಕೊಳ್ಳಿ. ನೂರಾರು ವರ್ಷದಿಂದ ಅವರು ಜೊತೆಜೊತೆಯಲ್ಲಿಯೇ ಬದುಕಿದ್ದಾರೆ. ಅನೇಕ ಜಾತಿಗಳು ಇವೆ. ಬಹಳ ಸಂತೋಷದಿಂದ ಇವರು ಇದ್ದಾರೆ, ಅವರು ಬಹಳ ಸಮಾಧಾನದಿಂದ ಇದ್ದರು. ಹಿಂದೆ ಯಾವ ಘಟನೆಗಳು ಕೂಡ ಆಗಿರಲಿಲ್ಲ. ಈ ಘಟನೆ ಈಗ ನಡೆದಿದೆ. ಅದಕ್ಕೆ ನಾವು ಈ ಒಂದು ವಿಚಾರವನ್ನು ಪರಸ್ಪರ ಜನಾಂಗವನ್ನು ದೂಷಿಸುವುದಕ್ಕೆ ಇಂತಹ ಒಂದು ಘಟನೆಯನ್ನು ಉಪಯೋಗ ಮಾಡತಕ್ಕದ್ದು, ಅದನ್ನು ನಾವು ಖಂಡಿತವಾಗಿ ಕೂಡ ಖಂಡಿಸಬೇಕಾಗುತ್ತದೆ. ಇದು ಜನಾಂಗಕ್ಕೆ ಮಸಿ ಬಳಿಯತಕ್ಕಂಥ ಕೆಲಸ. ಯಾವ ಕೊಲೇಗಾರ ಯಾವನೇ ಆದರೂ ಕೂಡ ಒಂದು ಜಾತಿಗೆ ಸೇರಿಯೇ ಇರುತ್ತಾನೆ. ಅವನಿಗೆ ಒಂದು ಜಾತಿ ಇದ್ದೇ ಇರುತ್ತದೆ. ಒಬ್ಬ ಕೊಲೆ ಮಾಡಿದ ಕೂಡಲೇ ಆ ಜಾತಿಯವರೆಲ್ಲಾ ಕೊಲೆಗಡುಕರು ಅಥವಾ ಜಾತಿಯವರನ್ನು ಖಂಡಿಸತಕ್ಕದ್ದು

ಈ ಮಾತು ನಡೆಯಬಾರದು. ಏಕೆ ಈ ತರಹ ಒಂದು ಕ್ರಿಮಿನಲ್ ಖಟ್ಲೆ ಇವತ್ತು ಜನಾಂಗ ದ್ವೇಷದ ಎತ್ತರಕ್ಕೆ ಏರಿಸತಕ್ಕಂಥ ವಿಚಾರವನ್ನು ನಾವು ಖಡಾಖಂಡಿತವಾಗಿ ಖಂಡಿಸಬೇಕಾಗಿದೆ. ಇದರಲ್ಲಿ, ಸತ್ಯಾಂಶ ಏನು? ಏಕೆಂದರೆ, ನಾವು ಸಿಬಿಐ ಎನ್‌ಕ್ವೈರಿ ಏಕೆ ಮಾಡಿದೆ? ನಾವು ಆ ದಿವಸ ಹೇಳಿದೆವು. ಏಕೆಂದರೆ ಇದು ಎಲ್ಲರ ಅಭಿಪ್ರಾಯ ಇತ್ತು. ಇದು ಬರೀ ನಮ್ಮ ಆ ವರ್ಗದ ಜನರ ಅಥವಾ ಒಂದು ಜಾತಿ ಜನರ ಅಭಿಪ್ರಾಯ ಅಲ್ಲ. ಶ್ರೀನಿವಾಸ ಪ್ರಸಾದ್ ಹೇಗೆ ಹೇಳಿದರೋ ಅದೇ ಪ್ರಕಾರ ಸನ್ಮಾನ್ಯ ಮಹದೇವರವರೂ ಕೂಡ ಸಿಬಿಐ ತನಿಖೆಗಾಗಿ ಒತ್ತಾಯಿಸಿದ್ದಾರೆ. I am telling you, ಸಿಬಿಐ ತನಿಖೆಗಾಗಿ ನೀವು ಏಕೆ ವಹಿಸಿದಿರಿ ಎಂದು ಯಾವ ಜನಾಂಗದವರು ಕೂಡ ಆಕ್ಷೇಪವೆತ್ತಲಿಲ್ಲ. ಏಕೆಂದರೆ ಸತ್ಯಾಂಶ ಬರುವುದಿದ್ದರೆ ಅದಕ್ಕೆ ಮಹದೇವರವರು ಕೂಡ ಅಡ್ಡಿ ಬರುವುದಕ್ಕೆ ಸಿದ್ಧರಿರಲಿಲ್ಲ. ನಾವು ಎರಡು ಜನಾಂಗದವರನ್ನು ಭೇಟಿಯಾಗಿ ಮಾತನಾಡಿದ್ದೇವೆ, ಅವರು ಗುಂಪುಗುಂಪಾಗಿ ಬಂದು ನನ್ನ ಹತ್ತಿರ ಮಾತನಾಡಿದ್ದಾರೆ. ಎಲ್ಲರ ಹತ್ತಿರ ಮಾತನಾಡಿದ್ದೇನೆ. ಅಲ್ಲದೇ ಅವರು ಬೆಂಗಳೂರಿಗೂ ಸಹ ಬಂದಿದ್ದರು. ಮಹದೇವುರಾಗಲಿ, ನಂಜನಗೂಡಿನ ಜನರಾಗಲಿ ನನ್ನ ಹತ್ತಿರ ಬಂದು ಮಾತನಾಡಿದರು. ಈ ಘಟನೆ ಬಗ್ಗೆ ಇಲ್ಲಿ ಹೆಚ್ಚು ಚರ್ಚೆಯಾದ ಕೂಡಲೇ ಅದು ಬಹಳ ಎತ್ತರಕ್ಕೆ ಹೋಗುತ್ತದೆ. ಅಷ್ಟೇನೂ ಇಲ್ಲ. ಅಲ್ಲಿ ತಪ್ಪು ತಿಳುವಳಿಕೆಯಿಂದ ಒಂದು ಮೆರವಣಿಗೆ ಮಾಡಿದ್ದಾರೆ. ನಾವು ಸಿಓಡಿಗೆ ರೆಫರ್ ಮಾಡಿದರೆ, ಆಗ ಏನಪ್ಪಾ, ಸಿಓಡಿ ಮೊಯಿಲಿಯವರು ವಹಿಸಿಕೊಂಡಿರುವ ಖಾತೆಯಲ್ಲಿದೆ, ಎಂದು ಜನರು ತಿಳಿದುಕೊಳ್ಳುತ್ತಾರೆ. ಆದ್ದರಿಂದ ಸಿಓಡಿಗೆ ಏಕೆ ಸಿಬಿಐಗೆ ರೆಫರ್ ಮಾಡಿದ್ದೇವೆ. ಅವರು ನಿಷ್ಪಕ್ಷಪಾತವಾಗಿ ತನಿಖೆ ನಡೆಸುವ ಬಗ್ಗೆ ಎಲ್ಲರಿಗೂ ವಿಶ್ವಾಸವಿದೆ, ಎಂದುಕೊಳ್ಳುತ್ತಾರೆ. ನಮ್ಮ ಮೇಲೆ ವಿಶಾಸವಿದೆ. ಅದರ ಇತ್ತೀಚಿನ ರಿಪೋರ್ಟ್ ಏನೆಂದು ನನಗೆ ಗೊತ್ತಿಲ್ಲ. ಈ ಘಟನೆಗೆ ಸಂಬಂಧಿಸಿದಂತೆ ಈಗಾಗಲೇ 25 ಜನರು ಅರೆಸ್ಟ್ ಆಗಿದ್ದಾರೆ. ಭೈರೇಗೌಡರೇ ಅರೆಸ್ಟ್ ಮಾಡುವಾಗ ಒಂದು ಕೋಮಿನ ಪೋಲೀಸರು ಹೋಗಿ ಅರೆಸ್ಟ್ ಮಾಡಿಲ್ಲ. ಪೋಲೀಸರಲ್ಲಿ ಎಲ್ಲಾ ಜಾತಿಯವರಿದ್ದಾರೆ, ಆ ಅರೆಸ್ಟ್‌ಗೆ ಎಲ್ಲರೂ ಕಾರಣರಾಗಿದ್ದಾರೆ, ಅರೆಸ್ಟ್ ಮಾಡುವುದಕ್ಕೆ ಲಿಂಗಾಯಿತ ಅಧಿಕಾರಿಗಳೂ ಕಾರಣರಾಗಿದ್ದಾರೆ. ಲಿಂಗಾಯಿತರನ್ನು ಲಿಂಗಾಯಿತ ಜಾತಿಗೆ ಸೇರಿದ ಪೋಲೀಸರು ಅರೆಸ್ಟ್ ಮಾಡಿಲ್ಲವೆಂದು ತಿಳಿದುಕೊಳ್ಳಬೇಡಿ. ಆದುದರಿಂದ, ಇದಕ್ಕೆ ನಾವು ಸುಮ್ಮನೆ ಜಾತಿಯ ಲೇಪ ಕೊಟ್ಟರೆ ಏನಾಗುತ್ತದೆಂದರೆ ನ್ಯಾಯವಾದ ತನಿಖೆಗೆ ತಡೆಯುಂಟಾಗುತ್ತದೆ. ಇದಕ್ಕೆ ಜಾತಿಯ ಲೇಪ ಕೊಡಬಾರದು. ಸದನದ ಮೂಲಕ ನನ್ನ ವಿನಂತಿಯೇನೆಂದರೆ, ಸವರ್ಣೀಯರಾಗಲಿ ಅಥವಾ ಪರಿಶಿಷ್ಟ ಜಾತೀ ವರ್ಗಗಳವರಾಗಲಿ, ಈ ಘಟನೆ ಬಗ್ಗೆ ಸಿಬಿಐ ತನಿಖೆಗಾಗಿ ಬಿಡಲು ಅವಕಾಶ ಮಾಡಿಕೊಡಿ. ಏಕೆಂದರೆ, ಯಾರೇ ಆಗಲಿ ಇದಕ್ಕೆ ಅನಾವಶ್ಯಕವಾಗಿ ಹಸ್ತಕ್ಷೇಪ ಮಾಡತಕ್ಕಂಥಾದ್ದು, ರಾಜಕೀಯ ಕಾರಣಕ್ಕಾಗಿ ಅಥವಾ ಒಂದು ಸಾಮಾಜಿಕ ಕಾರಣಕ್ಕಾಗಿ ಅಥವಾ ಯಾವುದೇ ಒಂದು ರೀತಿಯಲ್ಲಿ ಹಸ್ತಕ್ಷೇಪ ಮಾಡತಕ್ಕಂಥಾದ್ದು ಆಗಬಾರದು. ನಾವು ಆಡುವ ಮಾತಿನಿಂದಲೂ ಕೂಡ ಹಸ್ತಕ್ಷೇಪವಾಗುತ್ತದೆ, ಬರೀ ಕೃತಿಯಿಂದಲ್ಲ. ಈ ಬಗ್ಗೆ ಒಂದು ಕಡೆ ಮೆರವಣಿಗೆ ಮಾಡುವುದು, ಅದೇ ರೀತಿ ಮತ್ತೊಂದು ಕಡೆ ಮೆರವಣಿಗೆ ಮಾಡುವುದರಿಂದ ಏನಾಗುತ್ತದೆಂದರೆ ತನಿಖೆಗೆ ಒಂದು ರೀತಿಯ ಒತ್ತಡ ತಂದಂತಾಗುತ್ತದೆ. ಬಹುಶಃ ಯಾವುದೇ ಒತ್ತಡಕ್ಕೂ ಸಿಬಿಐ ಮಣಿಯುವುದಿಲ್ಲ. ಯಾರು ಕೊಲೆ ಮಾಡಿದ್ದಾರೋ, ಅವರನ್ನು ಹಿಡಿದೇ ಹಿಡಿಯುತ್ತಾರೆ. ಕೇಸ್ ಸಹ ಆಗುತ್ತದೆ. ಇದನ್ನು ಮೆರವಣಿಗೆಯಿಂದ ತಡೆಯುವುದಕ್ಕಾಗುವುದಿಲ್ಲ, ಅಥವಾ ಪ್ರತಿ ಮೆರವಣಿಗೆ ಮಾಡಿಕೊಂಡು ಅಮಾಯಕರಾದವರನ್ನೂ ಕೂಡ ಅರೆಸ್ಟ್ ಮಾಡುವುದನ್ನೂ ತಪ್ಪಿಸಲು ಆಗುವುದಿಲ್ಲ. ಯಾರನ್ನು ಅರೆಸ್ಟ್ ಮಾಡಬೇಕು, ಬಿಡಬೇಕು ಎನ್ನುವುದು ಸಿಬಿಐ ತನಿಖಾಧಿಕಾರಿಗಳಿಗೆ ಬಿಟ್ಟಿದ್ದುದು, ಅಥವಾ ಪೋಲೀಸ್ ಸ್ಪೆಷಲ್ ಇನ್‌ವೆಸ್ಟಿಗೇಷನ್ ಟೀಮ್ ಏನಿದೆ, ಅವರಿಗೆ ಈ ವಿಚಾರ ಬಿಟ್ಟಿದ್ದೇ ಹೊರತು ಮೆರವಣಿಗೆಯಿಂದ ಇಂತಹವರನ್ನು ಅರೆಸ್ಟ್ ಮಾಡಬೇಕೆಂದು ಹೇಳಿದರೆ ಅಂತಹವರನ್ನು ಅವರು ಅರೆಸ್ಟ್ ಮಾಡುವುದಿಲ್ಲ

Rule of law should prevail ಕಾರಣ ಯಾರೇ ಆಗಿರಲಿ, ಕೊಲೆ ಮಾಡತಕ್ಕಂಥ ವರ್ಗವೇ ಬೇರೆ, ಅದೊಂದು ಕೊಲೆಗಡುಕರು ಜಾತಿಯಾಗಿದೆ. ಅದೊಂದು ಜನಾಂಗವಲ್ಲ, ಅದು ಯಾವುದೇ ಜಾತಿಗೂ ಸೀಮಿತವಾಗಿಲ್ಲ. ಆದ್ದುರಿಂದ, ಇದನ್ನು ನಾವು ಇಲ್ಲಿಗೇ ನಿಲ್ಲಿಸೋಣ. ಏಕೆಂದರೆ, ಊರಿನ ಜನರಾಗಲಿ, ನಾವೆಲ್ಲರೂ ಕೂಡ ಟೀಮ್ ಕಳುಹಿಸಬೇಕಾದಂಥ ಪ್ರಶ್ನೆಯಲ್ಲ. ಅಷ್ಟು ಎತ್ತರಕ್ಕೆ ಈ ಪ್ರಕರಣವನ್ನು ಕೊಂಡೊಯ್ಯಬಾರದು. ಇದೊಂದು ಕೊಲೆ ಪ್ರಕರಣವೆಂದು ತಿಳಿದುಕೊಂಡು, ಸೀಮಿತವಾಗಿ ಅಲ್ಲಿನ ಜನರಿಗೆ ವಿಶ್ವಾಸ ಹುಟ್ಟಿ ಇದನ್ನು ಸಿಬಿಐ ತನಿಖೆಗಾಗಿ ಅವಕಾಶ ಮಾಡಿಕೊಡಬೇಕು. Let us leave it. ಇದೊಂದು ಪ್ರತ್ಯೇಕವಾದಂಥ ಕೊಲೆ ನಡೆದಂಥ ಘಟನೆ. That is for the investigating team to investigate. ಅಲ್ಲಿಗೆ ನಾವು ಮತ್ತೊಂದು ಟೀಮ್ ಕಳುಹಿಸಿದರೂ ಸಹ I think we are interfering with them. Let us not go into the backgroun on anything. ಅಲ್ಲಿಗೆ ಹೋಗಿ ಏನು ಕಾಂಪ್ರಮೈಸ್ ಮಾಡುತ್ತೀರಿ? I am just telling the broad aspect of the case. ಆದುದರಿಂದ ಈ ಘಟನೆಯ ತನಿಖೆಗಾಗಿ ನಾವು ಸಿಬಿಐಗೆ ವಹಿಸಿದ್ದೇವೆ. ಸ್ಪೆಷಲ್ ಟೀಮ್ ಆಫ್ ಇನ್‌ವೆಸ್ಟಿಗೇಷನ್‌ನವರು ನಿಷ್ಪಕ್ಷಪಾತವಾಗಿ ತನಿಖೆ ನಡೆಸುತ್ತಿದ್ದಾರೆ. ತನಿಖೆ ನಡೆಸುವುದಕ್ಕೆ ಯಾವುದೇ ವರ್ಗದವರೂ ಕೂಡ ಆಕ್ಷೇಪವೆತ್ತಿಲ್ಲ. ಈ ಘಟನೆ ಸಂಬಂಧವಾಗಿ ಯಾವುದೇ ಅಮಾಯಕರನ್ನು ಹಿಡಿಯಲಾಗಿದೆಯೆನ್ನುವ ಒಂದು ದೂರು ಸಹ ಇಮೊತ್ತಿನವರೆವಿಗೂ ಸಹ ಬಂದಿಲ್ಲ. ಇಲ್ಲಿ ತನಿಖೆ ಬಗ್ಗೆ ವಿಚಾರವಲ್ಲ. ಇದರಲ್ಲಿ ನಮ್ಮ-ನಮ್ಮ ಮೇಲುಗಾರಿಕೆ ವಿಚಾರವಿರುವಂಥಾದ್ದು. ಅವರವರ ಮೇಲುಗಾರಿಕೆಯನ್ನು ಇತ್ಯರ್ಥಪಡಿಸುವುದಕ್ಕೆ ನಾವು ಹೋಗಿ ತೀರ್ಮಾನ ಮಾಡುವುದಕ್ಕೆ ಆಗುತ್ತದೆಯೆ? ಮೇಲುಗಾರಿಕೆ ವಿಚಾರ ಮಾಡುವ ಯಾರೇ ಇರಬಹುದು ಅಥವಾ ಯಾವುದೇ ರೀತಿಯಾದಂಥ ಅಲ್ಲಿನ ಸ್ಥಳೀಯವಾದಂಥ ವಿಚಾರಗಳಿಗೆ ನಾವು ಹೋಗಿ ಏನಾದರೂ ರಾಜೀ ಮಾಡತಕ್ಕಂಥ, ಒಪ್ಪಂದ ಮಾಡತಕ್ಕಂಥದ್ದನ್ನು let us deal according to law ಕಾನೂನು ಪ್ರಕಾರ ಅಲ್ಲಿ ನಡೆಯಲಿ, ಈ ಭಾವನೆಗಳಿಗೆ ಅವಕಾಶವಿಲ್ಲ. ಆ ಊರಿನಲ್ಲಿರುವ ಹಿರಿಯರಾದವರು ಇದರ ಬಗ್ಗೆ ಸ್ವಲ್ಪ ವಿಚಾರ ಮಾಡಬೇಕು. ಇಲ್ಲದಿದ್ದರೆ, ಪರಸ್ಪರ ಮೆರವಣಿಗೆ ನಡೆದರೆ ಇದಕ್ಕೆ ಪ್ರತಿಯಾಗಿ ಇನ್ನೆರಡು ಮೆರವಣಿಗೆಗಳಾಗುತ್ತದೆ. ನಂತರ ನಾಲ್ಕು ಮೆರವಣಿಗೆ ತದನಂತರ ಹತ್ತು ಮೆರವಣಿಗೆಗಳನ್ನು ಮಾಡುವುದಕ್ಕೆ ಅವಕಾಶವಾಗುತ್ತದೆ. ಆದುದರಿಂದ, ಇದಕ್ಕೆ ಇತಿಶ್ರೀ ಹಾಡಬೇಕು.

ಏಕೆಂದರೆ ಕರ್ನಾಟಕ ರಾಜ್ಯದಲ್ಲಿ ಇಂದು ಏನು ಕೆಲವು ಜಾತಿ, ಜಾತಿಯ ದ್ವೇಷದಿಂದ ಕೊಲೆ ಮಾಡಿರುವುದು ಹೊಸದೇನಲ್ಲ ; ಅಂಥ ಪ್ರಕರಣಗಳು ಹಿಂದೆ ಕೂಡ ಆಗಿತ್ತು ಆದರೆ ಮುಂದೆ ಆಗಬಾರದು ಎಂದು ನಾವೆಲ್ಲಾ ಅಪೇಕ್ಷೆ ಪಡೋಣ, ಅದಕ್ಕಾಗಿ ನಾವೆಲ್ಲಾ ಹಾರೈಸೋಣ. ಈ ಸದನದಲ್ಲಿ ಎಲ್ಲರೂ ಸಹ ಈ ಘಟನೆಯ ಬಗ್ಗೆ ಖಂಡನೆ ಮಾಡಿದ್ದಾರೆ ಯಾರೂ ಕೂಡ ಅದನ್ನು ಬೆಂಬಲಿಸಿಲ್ಲ. ಆದರೆ ಇವರು ಅವರ ಮೇಲೆ ಧಿಕ್ಕಾರ ಮಾಡತಕ್ಕದ್ದಾ, ಅಥವಾ ಮಾಡಿರುವುದು. ಬಹುಶಃ ತಿಳುವಳಿಕೆ ಇಲ್ಲದೆ ಮಾಡಿದ್ದಾರೆ, ನಾವು ನ್ಯಾಯವಾಗಿ ಏನು ಮಾಡಬೇಕೋ ಆ ಕಾರ್ಯವನ್ನು ಮಾಡುವಾಗ ನಮ್ಮನ್ನು ದಾರಿ ತಪ್ಪಿಸಲು, ಅದರ ಮೇಲೆ ಒತ್ತಡವನ್ನು ಹಾಕಲು ನಾವು ಬಿಡುವುದಿಲ್ಲ, ಏಕೆಂದರೆ, after all, we have to discharge our duties. Rule of law will prevail. I am not afraid. ನನ್ನನ್ನು ಧೃತಿಗೆಡಿಸಲು, ನನ್ನ ಹೆಜ್ಜೆಯನ್ನು ತಪ್ಪಿಸಲು ಯಾರಿಂದಲೂ ಆಗುವುದಿಲ್ಲ, ನಾನು ಅದಕ್ಕೆ ಹೆದರುವುದಿಲ್ಲ, ಅವರುಗಳು ಬೇಕಾದರೆ ಇಂಥ ಸಾವಿರ ಧಿಕ್ಕಾರವನ್ನು ಹೇಳಲಿ, ಆದರೆ ನಾನು ಮಾತ್ರ ನನ್ನ ನ್ಯಾಯವಾದ ಕರ್ತವ್ಯದಿಂದ ವಿಮುಖವಾಗುವುದಿಲ್ಲ, ಇದರ ಬಗ್ಗೆ ಸಿ.ಬಿ.ಐ. ನಿಂದ ನ್ಯಾಯವಾಗಿ ತನಿಖೆ ಆಗಲಿ, ತಾವೂ ಕೂಡ ಅದಕ್ಕೆ ಹೆದರಬೇಕಾಗಿಲ್ಲ, ಸಾರ್ವಜನಿಕ

ಜೀವನದಲ್ಲಿ ಇರುವಾಗ, ಸತ್ಯದ ಪ್ರತಿಪಾದನೆಯನ್ನು ಮಾಡುವಾಗ ಟೀಕೆಗಳು, ಮೆರವಣಿಗೆಗಳು ಬರುತ್ತವೆ, ಅಂಥ ಟೀಕೆಗಳು ಮತ್ತು ಮೆರವಣಿಗೆಗಳಿಗೆಲ್ಲಾ ನಾವು ಬಗ್ಗಬೇಕಾಗಿಲ್ಲ. ಯಾರೂ ಕೂಡ ಅದಕ್ಕೆ ಬಗ್ಗಬೇಕಾಗಿಲ್ಲ, ಅದರ ಅವಶ್ಯಕತೆಯೂ ಕೂಡ ಇಲ್ಲ. ನಿಮ್ಮ ಹಕ್ಕನ್ನು ರಕ್ಷಣೆ ಮಾಡುವುದಕ್ಕೆ ನಿಮಗೆ ಶಕ್ತಿ ಇದೆ, ನನ್ನ ಹಕ್ಕನ್ನು ರಕ್ಷಣೆ ಮಾಡುವುದಕ್ಕೆ ನನಗೆ ಶಕ್ತಿ ಇದೆ, ಅದಕ್ಕೆ ಹಕ್ಕುಚ್ಯುತಿ ನಿರ್ಣಯದ ಅವಶ್ಯಕತೆ ಇಲ್ಲ, ನ್ಯಾಯವಾಗಿ ಮತ್ತು ನಮ್ಮ ಆತ್ಮಕ್ಕೆ ತೃಪ್ತಿಯಾಗಿ ನಮ್ಮ ಕರ್ತವ್ಯವನ್ನು ನಿರ್ವಹಣೆ ಮಾಡುವಾಗ ನಾವು ಯಾವುದಕ್ಕೂ ಹೆದರಬೇಕಾಗಿಲ್ಲ.

ಶ್ರೀಮತಿ ಸುಮಾವಸಂತ್ : ಅಧ್ಯಕ್ಷರೇ, ಇದರ ಬಗ್ಗೆ ಸದನದಲ್ಲಿ ಎಷ್ಟೊಂದು ಸದಸ್ಯರೆಲ್ಲಾ ಮಾತನಾಡಿದ್ದಾರೆ, ಆದರೆ ಕೇವಲ ಮಹಿಳಾ ಸದಸ್ಯರೊಬ್ಬರ ಮೇಲೆ ಧಿಕ್ಕಾರ ಕೂಗುವುದು ತಪ್ಪಲ್ಲವೇ? ಇದೂ ಸಹ ಒಂದು ರೀತಿಯಲ್ಲಿ ಮಹಿಳೆಯರ ಮೇಲೆ ದೌರ್ಜನ್ಯವಾದಂತೆ ಆಗುತ್ತದಲ್ಲವೇ ಎಂದು ಕೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಇದರ ಬಗ್ಗೆ ಸದನದ ಮೂಲಕ ಎಲ್ಲರಲ್ಲೂ ವಿನಂತಿ ಮಾಡಿಕೊಳ್ಳುತ್ತೇನೆ. ಯಾರೂ ಸಹ ಒಂದು ಜನಾಂಗ ದ್ವೇಷವನ್ನು ಮೇಲ್ಮಟ್ಟಕ್ಕೆ ಏರಿಸಬೇಕಾದ ಅವಶ್ಯಕತೆ ಇಲ್ಲ, ನ್ಯಾಯವಾಗಿ ಮತ್ತು ನಿಷ್ಪಕ್ಷಪಾತವಾಗಿ ತನಿಖೆ ಆಗಬೇಕು, ಅದಕ್ಕೆ ನಾವೆಲ್ಲರೂ ಸಹ ಸಹಕಾರ ಕೊಡೋಣ, ಯಾರು ತಪ್ಪಿತಸ್ಥರಿದ್ದಾರೆ ಅವರನ್ನು ರಕ್ಷಣೆ ಮಾಡತಕ್ಕ ಕೆಲಸಕ್ಕೆ ನಾವು ಹಸ್ತಕ್ಷೇಪ ಮಾಡಬಾರದು ಮತ್ತು ನಿಜವಾದಂಥ, ನ್ಯಾಯವಾದಂಥ ತನಿಖೆ ಆಗಬೇಕಾದರೆ ಈ ಮೆರವಣಿಗೆಗಳು ನಿಲ್ಲಬೇಕು, ಇದರ ಬಗ್ಗೆ ಹೇಳಿಕೆಗಳನ್ನು ಕೊಡುವುದು ನಿಲ್ಲಬೇಕು ಮತ್ತು ಅವನು ಅಪರಾಧಿ ಇವನು ಅಪರಾಧಿ ಎಂದು ಹೇಳಬಾರದು, ಆ ರೀತಿ ಹೇಳಬೇಕಾದರೆ, you must go and give evidence before the CBI. ನಾವು ಪರಸ್ಪರ ಮರ್ಮರ್ ಮಾಡತಕ್ಕದ್ದು, ರೂಮರ್ಸ್ ಮಾಡತಕ್ಕದ್ದು ಪ್ರಚೋದನೆ ಮಾಡತಕ್ಕದ್ದು, ಹೆಸರಿಸತಕ್ಕ ಕೆಲಸವಲ್ಲ. it is contrary to law. ಇದನ್ನು ಯಾರೂ ಮಾಡುವುದಕ್ಕೆ ಹೋಗಬಾರದು, ಏಕೆಂದರೆ ಪರಸ್ಪರ ದೋಷಾರೋಪಣೆಯನ್ನು ಮಾಡಿಕೊಂಡು ವೈಯಕ್ತಿಕವಾದಂಥ ಏನಾದರೂ ರಾಜಕೀಯವಾದಂಥ ಬೇಳೆಯನ್ನು ಬೇಯಿಸತಕ್ಕದ್ದಕ್ಕೆ ಇಂಥ ಪ್ರಕರಣಗಳನ್ನು ದುರುಪಯೋಗ ಮಾಡಿಕೊಳ್ಳಬಾರದು. ಆದ್ದರಿಂದ ಎಲ್ಲಾ ಜನಾಂಗದವರೂ ಸಹ ಈ ಸಮಯದಲ್ಲಿ ಸೌಹಾರ್ದತೆಯಿಂದ ಇರಬೇಕಾಗುತ್ತದೆ. ಇದಕ್ಕೆ ಹುಳಿಯನ್ನು ಹಿಂಡತಕ್ಕ ಕೆಲಸವನ್ನು ಯಾರೂ ಕೂಡ ಮಾಡಬಾರದು. ಜಾತಿಯ, ಜನಾಂಗದ ಹೆಸರಿನಲ್ಲಿ ಹುಳಿಯನ್ನು ಹಿಂಡತಕ್ಕ ಕೆಲಸವನ್ನು ಮಾಡಬಾರದು ಎಂದು ತಮ್ಮಲ್ಲಿ ವಿನಂತಿಸಿಕೊಂಡು ಇಲ್ಲಿಗೇ ಈ ವಿಷಯವನ್ನು ಬಿಟ್ಟು ಬಿಡಿ. ಇದರ ಬಗ್ಗೆ ಸಿ. ಬಿ. ಐ. ನಿಂದ ಸರಿಯಾಗಿ ತನಿಖೆ ಆಗಲಿ ಮತ್ತು ಅಮಾಯಕರು ಯಾರು ಇದ್ದಾರೆ ಅವರು ಇದರಲ್ಲಿ ಅನಾವಶ್ಯಕವಾಗಿ ಅಕ್ಯೂಸ್ಡ್ ಆಗುವುದು ಬೇಡ, ಅಥವಾ ತಪ್ಪಿತಸ್ಥರು ಯಾರು ಇದ್ದಾರೆ ಅವರು ಇದರಿಂದ ತಪ್ಪಿಸಿಕೊಳ್ಳಬಾರದು, ಇವೆರಡನ್ನೂ ನೋಡಿಕೊಳ್ಳಲು ಸಿ.ಬಿ.ಐಗೆ ಬಿಡೋಣ ಎಂದು ಹೇಳಿ, ಅವರು ಹಕ್ಕುಚ್ಯುತಿಯ ಬಗ್ಗೆ ಹೇಳಿದ್ದಾರೆ, ಆ ನಿರ್ಣಯ ತಮಗೇ ಬಿಟ್ಟಿರತಕ್ಕದ್ದು, ಅದಕ್ಕೆ ನಾನು ಕೈಹಾಕುವುದಿಲ್ಲ.

ಅಧ್ಯಕ್ಷರು : ಈಗ ಸದನದಲ್ಲಿ ಪ್ರಸ್ತಾಪ ಮಾಡಿರುವ ಸಂಸತ್ ಸದಸ್ಯರ ಹೆಸರನ್ನು ಕಡತದಿಂದ ಕೈಬಿಡಲು ಆದೇಶಿಸಿದ್ದೇನೆ.

## ಪ್ರಕಟಣೆ

ಅಧ್ಯಕ್ಷರು : ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮ 114 ರ ಮೇರೆಗೆ ವಿಧಾನ ಸಭೆಯಿಂದ ಅಂಗೀಕಾರವಾದ ಈ ಕೆಳಕಂಡ ವಿಧೇಯಕಗಳನ್ನು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ದಿನಾಂಕ : 5ನೇ ಏಪ್ರಿಲ್ 1993ರಂದು ಅನುಮೋದಿಸಲಾಯಿತೆಂದು ತಿಳಿಸುತ್ತೇನೆ.

1. ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 1993,
2. ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕ, 1993.

ವಿಷಯ : ವಿದ್ಯುತ್ ಸರಬರಾಜಿನ ಬಗ್ಗೆ ಮಂತ್ರಿಗಳ ಹೇಳಿಕೆಗೆ ಒತ್ತಾಯ

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಉಪ ಮುಖ್ಯಮಂತ್ರಿಗಳು ಮೊನ್ನೆ ದಿವಸ ಮಾತನಾಡುತ್ತಾ ನಾನು ಆಂಧ್ರಪ್ರದೇಶಕ್ಕೆ ಹೋಗಿ ವಿದ್ಯುಚ್ಛಕ್ತಿ ಸರಬರಾಜಿನ ಬಗ್ಗೆ ಅಲ್ಲಿನ ವಿದ್ಯುತ್ತ್ ಖಾತೆ ಮಂತ್ರಿಗಳ ಹತ್ತಿರ ಮಾತನಾಡಿ ಅನುಕೂಲ ಮಾಡಿಕೊಡುತ್ತೇನೆಂದು ಹೇಳಿದ್ದರು. ಮಾನ್ಯ ಉಪ ಮುಖ್ಯಮಂತ್ರಿಗಳು ಹೈದರಾಬಾದ್‌ಗೆ ಹೋಗಿಲ್ಲ. ಏಕೆಂದರೆ ಇವತ್ತು ಅವರು ನಮ್ಮ ಎದುರಿನಲ್ಲೇ ಪ್ರತ್ಯಕ್ಷವಾಗಿದ್ದಾರೆ. ಅವರು ಹೈದರಾಬಾದ್‌ಗೆ ಹೋಗುತ್ತಾರೋ ಬೇರೆ ಎಲ್ಲಿಗೆ ಹೋಗುತ್ತಾರೋ ಆ ಪ್ರಶ್ನೆ ಬೇರೆ. ಆದರೆ ಇವತ್ತು ಪರಿಸ್ಥಿತಿ ಬಹಳ ಕಠಿಣವಾಗುತ್ತಿದೆ . ನಾಳೆ ದಿವಸ ಬೆಂಗಳೂರು ಮತ್ತು ಕೋಲಾರ ಜಿಲ್ಲೆಯ ರೈತರು ಮಾನ್ಯ ಮುಖ್ಯ ಮಂತ್ರಿಗಳ ಮನೆಯ ಮುಂದೆ ಧರಣಿ ಮಾಡಬೇಕೆಂದು ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಟ್ರಾಕ್ಟರ್‌ಗಳಲ್ಲಿ ಮೆರವಣಿಗೆ ಹೊರಟು ತಮ್ಮ ಪ್ರತಿಭಟನೆಯನ್ನು ತೋರಿಸಬೇಕೆಂದು ಹೊರಟಿದ್ದಾರೆ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದಾದರೆ, ಮಾನ್ಯ ಮುಖ್ಯಮಂತ್ರಿಗಳು ರೈತರಿಗೆ ಅನುಕೂಲ ಆಗುವಂಥ ಯಾವುದಾದರೊಂದು ಹೇಳಿಕೆಯನ್ನು ಇವತ್ತು ಕೊಟ್ಟರೆ, ನಾಳೆ ರೈತರು ತಮ್ಮ ಕೆಲಸಕಾರ್ಯಗಳನೆಲ್ಲಾ ಬಿಟ್ಟು ವ್ಯವಸಾಯವನ್ನೆಲ್ಲಾ ಬಿಟ್ಟು ಇಲ್ಲಿಗೆ ಬರತಕ್ಕ ಅವಶ್ಯಕತೆ ಇರುವುದಿಲ್ಲ. ಆದ್ದರಿಂದ ಮಾನ್ಯ ಉಪ ಮುಖ್ಯಮಂತ್ರಿಗಳಾಗಲಿ, ಮುಖ್ಯಮಂತ್ರಿಗಳಾಗಲಿ ಒಂದು ಹೇಳಿಕೆಯನ್ನು ಕೊಟ್ಟರೆ ರೈತರನ್ನು ಸ್ವಲ್ಪಮಟ್ಟಿಗೆ ಶಾಂತಗೊಳಿಸಿದಂತೆ ಆಗುತ್ತದೆ. ದಯವಿಟ್ಟು ತಾವು ಮಾನ್ಯ ಮುಖ್ಯ ಮಂತ್ರಿಗಳ ಕಡೆಯಿಂದ ಒಂದು ಹೇಳಿಕೆಯನ್ನು ಕೊಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಇದರ ಬಗ್ಗೆ ಆಮೇಲೆ ಹೇಳಿಕೆ ಕೊಡಿಸುತ್ತೇನೆ.

ಅಧ್ಯಕ್ಷರು : ಇವತ್ತು ಮಾನ್ಯ ಉಪ ಮುಖ್ಯಮಂತ್ರಿಗಳು ಹೈದರಾಬಾದ್‌ಗೆ ಹೋಗಿ ಅಲ್ಲಿನ ವಿದ್ಯುತ್ ಮಂತ್ರಿಗಳ ಜೊತೆ ಮಾತುಕತೆ ಮಾಡಿಕೊಂಡು ಬಂದು ನಾಳೆ ಬೆಳಿಗ್ಗೆ ಸ್ಟೇಟ್‌ಮೆಂಟನ್ನು ಕೊಡುತ್ತೇನೆಂದು ನಿನ್ನೆಯ ದಿವಸ ಹೇಳಿದ್ದರು. ಆದರೆ ಮಾನ್ಯ ಉಪ ಮುಖ್ಯಮಂತ್ರಿಗಳು ಹೈದರಾಬಾದ್‌ಗೆ ಹೋಗದೆ ಇಲ್ಲೇ ಇದ್ದಾರೆ. ಆದ್ದರಿಂದ ಅವರು ಅಲ್ಲಿಗೆ ಹೋಗಿಬಂದ ಮೇಲೆ ಸ್ಟೇಟ್‌ಮೆಂಟ್ ಕೊಡುತ್ತಾರೋ, ಈಗಲೇ ಕೊಡುತ್ತಾರೋ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ.